21 January 2026 Wednesday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 79 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

ಭಾವನಾಂತರಂಗ

ಭೂಮಿಯು ಹೇಗೆ ಗುರುತ್ವಾಕರ್ಷಣೆ ಶಕ್ತಿಯಿಂದ ಅಚಲವಾಗಿ ನಿಂತಿರುವುದೋ, ಹಾಗೆಯೇ ಜೀವನವು ನಂಬಿಕೆ ಎಂಬ ತಳಹದಿಯ ಮೇಲೆ ನಿಂತಿದೆ!

-ಸ್ನೇಹಾ ಆನಂದ್

ಒಂದೊಳ್ಳೆ ಮಾತು

ಬುದ್ಧಿ ಇದ್ದವನು ಯುದ್ಧವನ್ನು ಗೆಲ್ಲುತ್ತಾನೆ...., ಗುಣ ಇದ್ದವನು ಮನಸ್ಸನ್ನು ಗೆಲ್ಲುತ್ತಾನೆ....., ಆದರೆ ತಾಳ್ಮೆ ಇದ್ದವನು ಜಗತ್ತನ್ನೇ ಗೆಲ್ಲುತ್ತಾನೆ....,

ಮೈಲಾರ ಸಾವಿತ್ರಿಬಾಯಿ

ಡಿಜಿಪಿ ವಜಾ ಕೂಡ ಆಗಬಹುದು

ರಾಸಲೀಲೆ ಪ್ರಕರಣದಲ್ಲಿ ರಾಮಚಂದ್ರ ರಾವ್ ಅಮಾನತು: ಪರಮೇಶ್ವರ್

ಬೆಂಗಳೂರು: ರಾಸಲೀಲೆ ಪ್ರಕರಣದಲ್ಲಿ ಡಿಜಿಪಿ ರಾಮಚಂದ್ರ ರಾವ್ ಅವರು ಡಿಸ್‌ಮಿಸ್ ಕೂಡ ಆಗಬಹುದು. ತಕ್ಷಣಕ್ಕೆ ಕ್ರಮತೆಗೆದುಕೊಳ್ಳಬೇಕು ಎನ್ನುವ ಕಾರಣಕ್ಕಾಗಿ ಅಮಾನತು ಮಾಡಲಾಗಿದೆ ಎಂದು ಗೃಹಸಚಿವ ಜಿ. ಪರಮೇಶ್ವರ್ ತಿಳಿಸಿದರು.

ಡಿಜಿಪಿ ಕಚೇರಿಯಲ್ಲಿ ನಡೆದಿದೆ ಎನ್ನಲಾದ ರಾಸಲೀಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಇಂತಹ ಘಟನೆಗಳು ಯಾರಿಗೂ ಗೌರವ ತರುವುದಿಲ್ಲ. ಎಷ್ಟೇ ದೊಡ್ಡವರಿದ್ದರೂ ಮುಲಾಜಿಲ್ಲದೇ ಕ್ರಮ ಆಗುತ್ತದೆ. ಸೀನಿಯರ್ ಆಫೀಸರ್ ಅನ್ನೋದನ್ನೂ ನೋಡದೆ ಕ್ರಮ ತೆಗೆದುಕೊಂಡಿದ್ದೇವೆ. ತನಿಖೆ ವರದಿ ನೋಡಿಕೊಂಡು ಮುಂದಿನ ಕ್ರಮ ಕೈಗೊಳ್ಳುತ್ತೇವೆ ಎಂದು ವಿವರಿಸಿದರು.

ನಿನ್ನೆ ನನಗೆ ಹುಷಾರಿರಲಿಲ್ಲ, ಮಲಗಿದ್ದೆ. ಆಮೇಲೆ ಅಧಿಕಾರಿಗಳಿಂದ ಮಾಹಿತಿ ಪಡೆದು ಮುಖ್ಯಮಂತ್ರಿಗಳೊಂದಿಗೆ ಮಾತನಾಡಿದ್ದೇನೆ. ಪೊಲೀಸ್ ಇಲಾಖೆ

ಮಾತ್ರವಲ್ಲ ಯಾವುದೇ ಇಲಾಖೆಯಲ್ಲೂ ಇಂಥಹ ಘಟನೆಗಳನ್ನ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಸಿಎಂ ಕೂಡ ಅಪ್ಸೆಟ್ ಆಗಿದ್ದಾರೆ. ಹಾಗಾಗಿ ಎಷ್ಟೇ ದೊಡ್ಡವರಿರಲಿ, ಹಿರಿಯರಿರಲಿ ಕ್ರಮ ಆಗಬೇಕು ಅಂತ ಹೇಳಿದ್ದೇನೆ. ಅದಕ್ಕೆ ಸಿಎಂ ಕೂಡ ಕ್ರಮ ತೆಗೆದುಕೊಳ್ಳುವಂತೆ ಹೇಳಿದರು. ಅಲ್ಲದೇ ಇಂತಹ ಕಠಿಣ ಸನ್ನಿವೇಶದಲ್ಲಿ ನಾವು ಕಠಿಣವಾಗಿಯೇ ಇರಬೇಕಾಗುತ್ತದೆ. ಹಾಗಾಗಿ ನಿನ್ನೆ ನಾನು ಅವರನ್ನ ಭೇಟಿ ಮಾಡಿಲ್ಲ ಎಂದು ಸ್ಪಷ್ಟಪಡಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪುಟ 2ಕ್ಕೆ

ಗ್ಲೋಲ್ಡ್ ಸ್ಮಗ್ಲಿಂಗ್ ಪ್ರಕರಣ: ಡಿಜಿಪಿ ವಿಚಾರಣೆಗೆ ನೋಟಿಸ್

ಬೆಂಗಳೂರು: ಚಿತ್ರನಟಿ ರನ್ಯಾರಾವ್ ಗ್ಲೋಲ್ಡ್ ಸ್ಮಗ್ಲಿಂಗ್ ಪ್ರಕರಣದಲ್ಲಿ ಡಿಜಿಪಿ ರಾಮಚಂದ್ರರಾವ್ ಅವರಿಗೆ ನೋಟಿಸ್ ನೀಡಲಾಗಿದೆ. ರಾಸಲೀಲೆ ಪ್ರಕರಣದ ಬೆನ್ನಲ್ಲೇ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಿದ್ದಾರೆ.

ಗ್ಲೋಲ್ಡ್ ಸ್ಮಗ್ಲಿಂಗ್ ಪ್ರಕರಣದಲ್ಲಿ ಸರ್ಕಾರಿ ವಾಹನ ದುರ್ಬಳಕೆ ಮಾಡಿರುವುದಾಗಿ ಚಾರ್ಜ್ ಮೆಮೋ ನೀಡಲಾಗಿತ್ತು. ರಾಮಚಂದ್ರರಾವ್ ಅವರ ಮಗಳು ರನ್ಯಾರಾವ್ ಕಾರನ್ನು ದುರ್ಬಳಕೆ ಮಾಡಿದ್ದರು. ರಾಮಚಂದ್ರರಾವ್ ಅವರಿಗೆ ನೋಟಿಸ್ ಮಾಡಿದ್ದ ಡಿಆರ್‌ಐ ಅಧಿಕಾರಿಗಳು ವಿಚಾರಣೆ ನಡೆಸಿದ್ದರು. ಮ್ಯಾರಥಾನ್ ವಿಚಾರಣೆ ಮಾಡಿದ ಪುಟ 2ಕ್ಕೆ

ವೀರಶೈವ-ಲಿಂಗಾಯತ ಮಹಾಸಭಾ ಅಧ್ಯಕ್ಷರಾಗಿ ಖಂಡ್ರೆ ಅವಿರೋಧ ಆಯ್ಕೆ

ಮಹಾಸಭಾ ಕಾರ್ಯಕಾರಿಣಿ ಸಭೆಯಲ್ಲಿ ಸರ್ವಾನುಮತದ ನಿರ್ಣಯ

ಬೆಂಗಳೂರು: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿ ಅರಣ್ಯ ಸಚಿವ ಈಶ್ವರ್ ಬಿ ಖಂಡ್ರೆ ಅವರನ್ನು ಅವಿರೋಧ ಆಯ್ಕೆ ಮಾಡಲಾಗಿದೆ.

ಬೆಂಗಳೂರಿನಲ್ಲಿ ಮಂಗಳವಾರ ನಡೆದ ಮಹಾಸಭಾ ಕಾರ್ಯಕಾರಿಣಿ ಸಭೆಯಲ್ಲಿ ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ಮಹಾಸಭಾದ ಮಹಾಪ್ರಧಾನ ಕಾರ್ಯದರ್ಶಿಯಾದ ಈಶ್ವರ ಖಂಡ್ರೆ ಅವರನ್ನು ಆಯ್ಕೆ ಮಾಡಲು ಸರ್ವಾನುಮತದ ನಿರ್ಣಯ ಕೈಗೊಳ್ಳಲಾಯಿತು ಎಂದು ಮಹಾಸಭಾ ರಾಜ್ಯಾಧ್ಯಕ್ಷ ಶಂಕರ್ ಮಹಾದೇವ ಬಿದರಿ ತಿಳಿಸಿದರು.

ಕಾರ್ಯಕಾರಿ ಸಮಿತಿ ಸಭೆಯಲ್ಲಿ ಪುಟ 2ಕ್ಕೆ

ಒಳಪಂಗಡ ಒಗ್ಗೂಡಿಸಲು ಶ್ರಮ

ವೀರಶೈವ ಮತ್ತು ಲಿಂಗಾಯಿತ ಸಮುದಾಯ ಬೇರೆ ಬೇರೆಯಲ್ಲ. ಹೀಗಾಗಿ ಸಮಾಜದ ಎಲ್ಲ ಒಳ ಪಂಗಡಗಳನ್ನು ಒಗ್ಗೂಡಿಸುವುದು ಅತ್ಯಂತ ಮುಖ್ಯವಾಗಿದೆ. ನಾನು ಈ ನಿಟ್ಟಿನಲ್ಲಿ ಶ್ರಮಿಸುತ್ತೇನೆ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾದ ಈಶ್ವರ್ ಖಂಡ್ರೆ ತಿಳಿಸಿದರು. ಮಹಾಸಭಾದ ನೂತನ ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿದ ನಂತರ ಮಾತನಾಡಿದ ಅವರು, ವೀರಶೈವ ಲಿಂಗಾಯತ ಪುಟ 2ಕ್ಕೆ

ಒಕ್ಕೂಟ ವ್ಯವಸ್ಥೆಗೆ ಕೇಂದ್ರ ಧಕ್ಕೆ: ದಕ್ಷಿಣ ಭಾರತದ ಸಿಎಂಗಳ ಸಭೆ

ಬೆಂಗಳೂರು: ಕೇಂದ್ರ ಸರ್ಕಾರ ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾಗಿ ಕೈಗೊಳ್ಳುತ್ತಿರುವ ನಿರ್ಧಾರಗಳ ಕುರಿತು ಚರ್ಚಿಸಲು ದಕ್ಷಿಣ ಭಾರತದ ಮುಖ್ಯಮಂತ್ರಿಗಳ ಸಭೆಯನ್ನು ಶೀಘ್ರವೇ ಕರೆಯಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ದಕ್ಷಿಣ ಭಾರತ ಸಮಾಜವಾದಿಗಳ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು. ಕೇಂದ್ರ ವ್ಯವಸ್ಥೆ ಒಕ್ಕೂಟ ವ್ಯವಸ್ಥೆಯನ್ನು ಹಾಳು ಮಾಡುವ ರೀತಿಯಲ್ಲಿಯೇ ನಡೆದುಕೊಳ್ಳುತ್ತಿದೆ. ಇದರಿಂದ ರಾಜ್ಯಗಳಿಗೆ ಕೇಂದ್ರದಿಂದ ಬರಬೇಕಾದ ಅನುದಾನ ಕಡಿಮೆಯಾಗಿದೆ. ದಕ್ಷಿಣ ಭಾರತದ ರಾಜ್ಯಗಳಿಗೆ ಹೆಚ್ಚು ಅನ್ಯಾವವಾಗುತ್ತಿದೆ. ಇದನ್ನು ಪ್ರಜಾಸತ್ತಾತ್ಮಕವಾಗಿಯೇ ಪ್ರಶ್ನಿಸಬೇಕಾಗಿದೆ ಎಂದು ಹೇಳಿದರು.

ಕರ್ನಾಟಕವು ಕೇಂದ್ರಕ್ಕೆ ಹೆಚ್ಚಿನ ತೆರಿಗೆ ನೀಡುವ ರಾಜ್ಯಗಳಲ್ಲಿ ಒಂದು. ಆದರೆ ನಮಗೆ ಕೇಂದ್ರದಿಂದ ಬರುತ್ತಿರುವ ಅನುದಾನದ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ. ಈಗ ಮನರೇಗ ಯೋಜನೆ ಮೂಲಕ ನೀಡುತ್ತಿದ್ದ ಅನುದಾನದ ಪ್ರಮಾಣ ತಗ್ಗಿಸಿದ್ದು, ರಾಜ್ಯಗಳ ಆರ್ಥಿಕ ವ್ಯವಸ್ಥೆಗದ ಹೊಡೆತ ಬೀಳಲಿದೆ ಎಂದು ಟೀಕಿಸಿದರು.

ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆ ಮಾಡುವ ಮೂಲಕ ದಕ್ಷಿಣ ರಾಜ್ಯಗಳ ವ್ಯಾಪ್ತಿಯ ಕ್ಷೇತ್ರಗಳ ಪ್ರಮಾಣ ಕಡಿಮೆ ಮಾಡಿ ಹಿಂದಿ ಭಾಷೆ ಪ್ರಾಬಲ್ಯ ಇರುವ ರಾಜ್ಯಗಳಲ್ಲಿ ಕ್ಷೇತ್ರಗಳ ಸಂಖ್ಯೆ ಹೆಚ್ಚಿಸುವ ಹುನ್ನಾರ ನಡೆದಿದೆ. ಇದನ್ನು ಬಲವಾಗಿ ವಿರೋಧಿಸಿ ನಮ್ಮ ಅಸ್ತಿತ್ವ ಉಳಿಸಿಕೊಳ್ಳಬೇಕಿದೆ ಎಂದು ಹೇಳಿದರು.

ಸಿಎಂ ಹುದ್ದೆ ಸುಲಭಕ್ಕೆ ಸಿಕ್ಕಲ್ಲ!

ಅಧಿಕಾರವಷ್ಟೇ ಅಲ್ಲ ತಾಳ್ಮೆಯೂ ಶಾಶ್ವತವಲ್ಲ: ಡಿ.ಕೆ.ಸುರೇಶ್

ಬೆಂಗಳೂರು: ಗ್ರಾಮ ಪಂಚಾಯಿತಿ ಅಧ್ಯಕ್ಷರೇ ಅಧಿಕಾರ ಬಿಟ್ಟುಕೊಡಲು ಏನಾದರೂ ನೆಪ ಹೇಳುತ್ತಾರೆ. ಇಂಥ ಸಂದರ್ಭದಲ್ಲಿ ಮುಖ್ಯ ಮಂತ್ರಿ ಹುದ್ದೆ ಅಷ್ಟು ಸುಲಭವಾಗಿ ಸಿಗುತ್ತದೆಯೇ? ಅಣ್ಣನ ಹಣೆಯಲ್ಲಿ ಬರೆದಿದ್ದರೆ ಅವರಿಗೆ ಸಿಕ್ಕೇ ಸಿಗುತ್ತದೆ ಎಂದು ಡಿಕೆಶಿ ಸಹೋದರ ಡಿ.ಕೆ.ಸುರೇಶ್ ಅಭಿಪ್ರಾಯ ಪಟ್ಟಿದ್ದಾರೆ.

ಸುದ್ದಿಗಾರರ ಜೊತೆ ಮಂಗಳವಾರ ಮಾತ ನಾಡಿದ ಅವರು, ರಾಜಕಾರಣದಲ್ಲಿ ಅಧಿಕಾರ ಸೇರಿದಂತೆ ಯಾವುದೂ ಶಾಶ್ವತವಲ್ಲ. ಹಾಗೆಯೇ ತಾಳ್ಮೆ ಯೂ ಶಾಶ್ವತವಲ್ಲ. ನಾಲ್ಕು ದಿನ ಅಧ್ಯಕ್ಷ ನಾಗುತ್ತೇನೆ. ನಂತರ ಮಾಜಿ ಎಂದು ಜನರು ಕರೆಯ ಲಾದರೂ ಸ್ಥಾನ ಬೇಕು ಎಂದು ಗೋಗರೆದು ಪಂಚಾಯಿತಿ ಅಧ್ಯಕ್ಷ ರಾದವರೂ ಅವಧಿ ಮುಗಿದ ನಂತರ ಸ್ಥಾನ ಬೇಕು ಹೇಳುತ್ತಾರೆ. ವ್ಯವಸ್ಥೆಯೇ ಹಾಗೆ ಇದೆ. ಚಿಕ್ಕ ವಯಸ್ಸಿನಿಂದಲೂ

ಡಿ.ಕೆ.ಶಿವಕುಮಾರ್ ಇಂತಹ ಬೆಳವಣಿಗೆಗಳನ್ನು ನೋಡಿಕೊಂಡು ಬಂದಿದ್ದಾರೆ ಎಂದು ಮಾರ್ಮಿಕವಾಗಿ ಮಾತನಾಡಿದರು.

ನಾಯಕತ್ವ ಬದಲಾವಣೆಯಾದರೆ ಒಂದು ವರ್ಗದ ಮತ ಕಾಂಗ್ರೆಸ್ ಪಕ್ಷಕ್ಕೆ ಬರಲ್ಲ ಎಂದು ಬಿಂಬಿಸುವುದು ಸರಿಯಲ್ಲ. ಎಲ್ಲಾ ವರ್ಗದ ಮತಗಳು ಕಾಂಗ್ರೆಸ್ ಪಕ್ಷಕ್ಕೆ ಬೇಕು. ಶಿವಕುಮಾರ್ ಅವರು ಪಕ್ಷಕ್ಕೆ ನಿಷ್ಠರಾಗಿದ್ದಾರೆ. ಕೆಲವರು ವ್ಯಕ್ತಿಗೆ ನಿಷ್ಠರಾಗಿದ್ದಾರೆ. ಅವರು ಅಧಿಕಾರಕ್ಕಾಗಿಯೇ ಇರುತ್ತಾರೆ ಎಂದು ಹೇಳಿದರು.

ಡಿಕೆಶಿ ತಾಳ್ಮೆಯಿಂದ ಇರಲು ರಾಹುಲ್ ಗಾಂಧಿ ಸೂಚನೆ

ಅಧಿಕಾರ ಹಂಚಿಕೆ ವಿಚಾರವಾಗಿ ತಾಳ್ಮೆಯಿಂದ ಇರುವಂತೆ ಪಕ್ಷದ ಹೈಕಮಾಂಡ್ ಸೂಚಿಸಿದೆ. ರಾಹುಲ್ ಗಾಂಧಿ ಅವರು ಸೂಕ್ತ ಸಮಯದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳುವ ಭರವಸೆ ನೀಡಿದ್ದಾರೆ. ನಮ್ಮಣ್ಣ ಪಕ್ಷದ ಶಿಸ್ತಿನ ಸಿಪಾಯಿ. ಎಲ್ಲರನ್ನೂ ಒಟ್ಟಾಗಿ ತೆಗೆದುಕೊಂಡು ಹೋಗಬೇಕು ಎಂಬ ಗುರಿ ಇಟ್ಟುಕೊಂಡಿದ್ದಾರೆ. ಅಧಿಕಾರ ಸುಲಭವಾಗಿ ಬರುವುದಿಲ್ಲ. ನಮ್ಮ ಮುಂದಿನ ಗುರಿ 2028ರ ಚುನಾವಣೆ. ಈ ಚುನಾವಣೆಯನ್ನು ಒಗ್ಗಟ್ಟಾಗಿ ಎದುರಿಸಬೇಕು. ಶಾಸಕರು, ಕಾರ್ಯಕರ್ತರ ಹಿತದೃಷ್ಟಿಯಿಂದ ತಾಳ್ಮೆ ವಹಿಸಬೇ

ಕಿದೆ ಎಂದು ಡಿ.ಕೆ.ಸುರೇಶ್ ಹೇಳಿದರು. ಎಷ್ಟು ವರ್ಷ ಕಾಯುತ್ತೀರಾ ಎಂಬ ಪ್ರಶ್ನೆಗೆ ಅವರು, ಕಾಯೋಣ ದೇವರ ಇಚ್ಛೆ, ರಾಜಕೀಯದಲ್ಲಿ ಯಾವುದು ಶಾಶ್ವತ ಅಲ್ಲ, ಅಧಿಕಾರನೂ ಶಾಶ್ವತ ಅಲ್ಲ, ತಾಳ್ಮೆನೂ ಶಾಶ್ವತ ಅಲ್ಲ ಎಂದರು.

ಜನವರಿ ಅಂತ್ಯಕ್ಕಿಲ್ಲ ಬುಲಾವ್

ಜನವರಿ ಅಂತ್ಯಕ್ಕೆ ದೆಹಲಿಗೆ ಹೈಕಮಾಂಡ್ ಬುಲಾವ್ ಬರಲಿದೆಯಾ ಎಂಬ ಪ್ರಶ್ನೆಗೆ ಉತ್ತರಿಸಿದ ಡಿ.ಕೆ ಸುರೇಶ್ ಅವರು, ಜ.29ರವರೆಗೂ ಅಧಿವೇಶನ ಇದೆಯಲ್ಲಪ್ಪ, ಅಧಿವೇಶನ ನಡೆಯುತ್ತಿರುವಾಗ ಹೇಗೆ ಬುಲಾವ್ ಬರಲಿದೆ? ರಾಜಕಾರಣಿಗಳಿಗೆ ಬಿಡುವೇ ಇರಲ್ಲ. ರಾಜಕಾರಣಿಗಳಿಗೆ ನಿದ್ದೆ ಇರಲ್ಲ. ಊಟ ಇರಲ್ಲ, ನೆಮ್ಮದಿ ಇರಲ್ಲ ಎಂದರು. ಈ ಮಾತು ಸಿಎಂ ಸಿದ್ದರಾಮಯ್ಯನವರನ್ನು ಉದ್ದೇಶಿಸಿ ಹೇಳಿದಂತಿತ್ತು.

ಅಧಿವೇಶನದ ನಂತರ ಬಜೆಟ್ ಸಿದ್ಧತೆ: ಸಿಎಂ

ಬೆಂಗಳೂರು: ವಿಧಾನಮಂಡಲ ಜಂಟಿ ಅಧಿವೇಶನ ಜನವರಿ 22ರಿಂದ 31ರವರೆಗೆ ನಡೆಯಲಿದೆ. ನರೇಗಾ ಯೋಜನೆ ಬಗ್ಗೆ ವಿಶೇಷ ಚರ್ಚೆ ನಡೆಯಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣ ಮತ್ತು ನರೇಗಾ ಯೋಜನೆ ಬದಲಾವಣೆ ಬಗ್ಗೆ ವಿಶೇಷ ಚರ್ಚೆ ನಡೆಯಲಿದೆ. ಅಧಿವೇಶನದ ನಂತರ ಆಯ-ವ್ಯಯದ ಸಿದ್ಧತೆ ಪ್ರಾರಂಭಿಸಲಾಗುವುದು ಎಂದರು. ನವದೆಹಲಿಗೆ ಭೇಟಿ ನೀಡುವ ಬಗ್ಗೆ ಪ್ರತಿಕ್ರಿಯೆ ನೀಡಿ, ವರಿಷ್ಠರು ಕರೆ ನೀಡಿದರೆ ನವದೆಹಲಿಗೆ ತೆರಳುವುದಾಗಿ ತಿಳಿಸಿದರು. ಡಿಜಿಪಿ ರಾಮಚಂದ್ರರಾವ್ ಅವರ ಅನುಚಿತ ವರ್ತನೆ ವಿರುದ್ಧ ಕ್ರಮದ ಬಗ್ಗೆ ಪುಟ 2ಕ್ಕೆ

ಮೃಗಾಲಯದ ಹುಲಿ ಸಾವು

ಮೈಸೂರು: ನಗರದ ಚಾಮರಾಜೇಂದ್ರ ಮೃಗಾಲಯದ ತಾರ ಮತ್ತು ರಾಕಿ ಹುಲಿಗಳಿಗೆ ಜನಿಸಿದ್ದ ಸುಮಾರು 3 ವರ್ಷ 9 ತಿಂಗಳ ಪ್ರೀತಿ ಎಂಬ ಹೆಸರಿನ ಹೆಣ್ಣು ಹುಲಿ ಮರಣ ಹೊಂದಿದೆ. ಕಳೆದ ಐದು ದಿನಗಳಿಂದ ಆಹಾರ ತ್ಯಜಿಸಿ ಬಳಲುತ್ತಿದ್ದ ಹುಲಿಗೆ ಮೃಗಾಲಯದ ಪಶುವೈದ್ಯಾಧಿಕಾರಿಗಳು ಚಿಕಿತ್ಸೆ ನೀಡಿದ್ದರೂ ಫಲಕಾರಿಯಾಗದೆ ಸಾವನ್ನಪ್ಪಿದೆ.

ಸಿದ್ದಗಂಗಾ ಶ್ರೀಗಳ ಸ್ಮರಣೆ: ಉಪರಾಷ್ಟ್ರಪತಿ ಭಾಗಿ



ತುಮಕೂರು: ಸಿದ್ದಗಂಗಾ ಮಠದ ಶ್ರೀ ಶಿವಕುಮಾರ ಮಹಾಯೋಗಿಗಳು ಲಿಂಗೈಕ್ಯರಾಗಿ 7 ವರ್ಷ. ಶ್ರೀಮಠದಲ್ಲಿ ಜ.21ರಂದು ಆಯೋಜಿಸಿರುವ 7ನೇ ವರ್ಷದ ಪುಣ್ಯ ಸಂಸ್ಮರಣೋತ್ಸವದಲ್ಲಿ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಭಾಗವಹಿಸುವರು.

ಬುಧವಾರ ಬೆಳಗ್ಗೆ 10.50ಕ್ಕೆ ಮಠಕ್ಕೆ ಆಗಮಿಸಲಿರುವ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು, ಶಿವಕುಮಾರ ಶ್ರೀಗಳ ಗದ್ದಿಗೆಗೆ ಪೂಜೆ ಸಲ್ಲಿಸುವರು. ಬಳಿಕ ಸಭಾ ಪುಟ 2ಕ್ಕೆ

ಬಿಜೆಪಿ ನೂತನ ಸಾರಥಿ ನಬಿನ್ ಅಧಿಕಾರ ಸ್ವೀಕಾರ

ನವದೆಹಲಿ: ಬಿಜೆಪಿ ನೂತನ ರಾಷ್ಟ್ರೀಯ ಅಧ್ಯಕ್ಷರಾಗಿ ನಿತಿನ್ ನಬಿನ್ ಮಂಗಳವಾರ ಅಧಿಕಾರ ಸ್ವೀಕರಿಸಿದರು. 1980ರಲ್ಲಿ ಸ್ಥಾಪನೆಯಾದ ಬಿಜೆಪಿಯ 12ನೇ ರಾಷ್ಟ್ರೀಯ ಅಧ್ಯಕ್ಷರಾಗಿ 45 ವಯಸ್ಸಿನ ನಬಿನ್ ಅಧಿಕಾರ ವಹಿಸಿಕೊಂಡಿದ್ದಾರೆ.

ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಜೆ.ಪಿ.ನಡ್ಡಾ ಅವರ ಅವಧಿ ಪೂರ್ಣಗೊಂಡ ಬೆನ್ನಲ್ಲೇ ಪಕ್ಷ ನಡೆಸಿದ ಚುನಾವಣೆಯಲ್ಲಿ ನಿತಿನ್ ಅವಿರೋಧವಾಗಿ ಆಯ್ಕೆಯಾದರು. ದೆಹಲಿಯಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸಮ್ಮುಖದಲ್ಲಿ ನಬಿನ್ ನೂತನ ಅಧ್ಯಕ್ಷರಾಗಿ ಪ್ರಮಾಣ ಸ್ವೀಕರಿಸಿದರು.

ಬಿಜೆಪಿ ಸಾಂಸ್ಥಿಕ ಚುನಾವಣೆಯ ಚುನಾ

ವಣಾಧಿಕಾರಿ ಕೆ.ಲಕ್ಷ್ಮಣ್ ಅವರು ನಬಿನ್ ಆಯ್ಕೆಯನ್ನ ಘೋಷಿಸಿದರು. ಈ ಮೊದಲು ನಬಿನ್ ಅವರನ್ನು ಪಕ್ಷದ ಕಾರ್ಯಾಧ್ಯಕ್ಷರಾಗಿ ಬಿಜೆಪಿ ನೇಮಿಸಿತ್ತು. ಇದಕ್ಕೂ ಮೊದಲು ಬಿಹಾರ ಸರ್ಕಾರದಲ್ಲಿ ಕಾನೂನು ಮತ್ತು ನ್ಯಾಯ, ವಸತಿ ಖಾತೆ ಸಚಿವರಾಗಿದ್ದ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು.

ಬಿಹಾರ ಬಿಜೆಪಿಯ ಹಿರಿಯ ಪುಟ 2ಕ್ಕೆ

ಬಸ್ ಅಪಘಾತ: ಒಬ್ಬ ಸಾವು

ಮೈಸೂರಿನಿಂದ ಮಂತ್ರಾಲಯಕ್ಕೆ ಹೋಗುತ್ತಿದ್ದ ಬಸ್ ನಜ್ಜುಗುಜ್ಜು

ಚಿಕ್ಕಬಳ್ಳಾಪುರ: ಮೈಸೂರಿನಿಂದ ಬೆಂಗಳೂರು ಮೂಲಕ ಮಂತ್ರಾಲಯಕ್ಕೆ ಹೋಗುತ್ತಿದ್ದ ಖಾಸಗಿ ಸ್ಲೀಪರ್ ಬಸ್ ಜಿಲ್ಲೆಯ ಅಗಲಗುರ್ಕಿ ಬಳಿ ಟ್ರಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಒಬ್ಬರು ಸಾವಿಗೀಡಾಗಿದ್ದಾರೆ. 10 ಮಂದಿ ಗಾಯಗೊಂಡಿದ್ದಾರೆ. ಬಸ್ ಕ್ಲೀನರ್ ಸೇರಿದಂತೆ ಇಬ್ಬರು ಗಂಭೀರ ಗಾಯಗೊಂಡಿದ್ದಾರೆ. ಎಲ್ಲ ಗಾಯಾಳುಗಳನ್ನು ಚಿಕ್ಕಬಳ್ಳಾಪುರ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಬಿಹಾರ ಮೂಲದ 20 ವರ್ಷದ ಸುಹಾಸ್ ಎಂಬ ಯುವಕ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾನೆ. ಮಧ್ಯರಾತ್ರಿ ಒಂದು ಗಂಟೆ ಸುಮಾರಿಗೆ ಅಪಘಾತ ಸಂಭವಿಸಿದೆ.

ಅಪಘಾತದಲ್ಲಿ ಬಸ್‌ನ ಮುಂಭಾಗ ಸಂಪೂರ್ಣ ನಜ್ಜುಗುಜ್ಜಾಗಿದೆ. ಬಸ್ ಕಂಟ್ಯೆನರ್‌ನ ಒಳಗೆ ಸಿಲುಕಿಕೊಂಡಿದೆ.

ಸುಗಮ್ ಟ್ರಾವೆಲ್ಸ್ ಸೇರಿದ ಖಾಸಗಿ ಸ್ಲೀಪರ್ ಬಸ್ ಮೈಸೂ

ಮೊದಲ ಪುಟದಿಂದ

ಮನೆಯೂಟ ಆದೇಶಕ್ಕೆ ತಡೆಯಾಜ್ಞೆ

ತಡೆಯಾಜ್ಞೆ ನೀಡಬೇಕೆಂದು ರಾಜ್ಯ ಸರ್ಕಾರ ಮನವಿ ಮಾಡಿತ್ತು. ಸರ್ಕಾರಿ ವಕೀಲರ ವಾದವನ್ನು ಆಲಿಸಿದ ನ್ಯಾಯಮೂರ್ತಿ ನಾಗಪ್ರಸನ್ನ ಅವರಿದ್ದ ಪೀಠ 57ನೇ ಸಿಸಿಎಚ್ ಕೋರ್ಟ್ ನೀಡಿದ್ದ ಆದೇಶಕ್ಕೆ ಮಧ್ಯಂತರ ತಡೆ ನೀಡಿದೆ. ಕಾನೂನಿಗೆ ಎಲ್ಲರೂ ಒಂದೇ. ಯಾರಿಗೂ ವಿಶೇಷ ಸವಲತ್ತು ನೀಡುವಂತಿಲ್ಲ. ಜೈಲು ಕೈಪಿಡಿಯಲ್ಲಿ ಮನೆ ಊಟವನ್ನು ಕೇವಲ ಬಹಳ ವಿಶೇಷ ಸಂದರ್ಭದಲ್ಲಿ ಐಜಿಪಿ ಅವರ ಒಪ್ಪಿಗೆ ಮೇರೆಗೆ ಮಾತ್ರವೇ ನೀಡಬೇಕು. ಅದೂ ವೈದ್ಯಕೀಯ ಕಾರಣ ಆಗಿರಬೇಕು ಎಂದು ಹೈಕೋರ್ಟ್ ಹೇಳಿದೆ. ಹೀಗಾಗಿ ಮನೆಯೂಟದ ನಿರೀಕ್ಷೆಯಲ್ಲಿದ್ದ ಪವಿತ್ರಾ ಗೌಡ ಇತರರಿಗೆ ಹಿನ್ನಡೆಯಾಗಿದೆ.

ಅಧಿವೇಶನದ ನಂತರ ಬಜೆಟ್ ಸಿದ್ಧತೆ

ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿ, ಅವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸಿ, ಅಮಾನತ್ತುಗೊಳಿಸಲಾಗಿದೆ ಎಂದರು. ಸಚಿವ ಆರ್.ಬಿ. ತಿಮ್ಮಾಪುರ ವಿರುದ್ಧ ಕೇಳಿ ಬಂದಿರುವ ಆರೋಪ ಕುರಿತು, ನನಗೆ ಮಾಹಿತಿ ಇಲ್ಲ. ನೀವು ಈಗ ಕೇಳಿದಾಗಲೇ ಗೊತ್ತಾಗಿದ್ದು ಎಂದು ಹೇಳಿದರು.

ಖಂಡ್ರೆ ಅವಿರೋಧ ಆಯ್ಕೆ

ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಈಶ್ವರ ಬಿ ಖಂಡ್ರೆ ಅವರನ್ನು ಆಯ್ಕೆ ಮಾಡಲು ಎಲ್ಲ ಸದಸ್ಯರೂ ಒಮ್ಮತ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಅವಿರೋಧವಾಗಿ ಆಯ್ಕೆ ನಡೆಯಿತು. ಕಳೆದ 13 ವರ್ಷಗಳಿಂದ ಮಹಾಸಭಾ ರಾಷ್ಟ್ರೀಯ ಮಹಾ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿರುವ ಈಶ್ವರ ಖಂಡ್ರೆ ಅವರು ಒಂದು ವರ್ಷದಿಂದ ಹಿರಿಯ ಉಪಾಧ್ಯಕ್ಷರ ಪ್ರಭಾರ ಹೊಣೆ ಯನ್ನೂ ನಿಭಾಯಿಸಿದ್ದರು. ತಮ್ಮ ತಂದೆ ಭೀಮಣ್ಣ ಖಂಡ್ರೆ ಅವರ ಮಾರ್ಗದಲ್ಲೇ ನಡೆದು ಸಮುದಾಯದ ಏಳಿಗೆಗಾಗಿ ಶ್ರಮಿಸುತ್ತಿರುವ ಈಶ್ವರ ಖಂಡ್ರೆ ಈಗ ಮಹಾಸಭಾ ಅಧ್ಯಕ್ಷರಾಗಿ ಅವಿರೋಧ ವಾಗಿ ಆಯ್ಕೆಯಾಗುವ ಮೂಲಕ ಸಮಾಜಕ್ಕೆ ಹೊಸ ಭರವಸೆ ಮೂಡಿಸಿದ್ದಾರೆ ಎಂದು ಬಿದರಿ ತಿಳಿಸಿದರು.

ಸಿದ್ದಗಂಗಾ ಶ್ರೀಗಳ ಸ್ಮರಣೆ

ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಉಪ ರಾಷ್ಟ್ರಪತಿಗಳಿಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಕೇಂದ್ರ ಸಚಿವ ವಿ ಸೋಮಣ್ಣ ಸಾಥ್ ನೀಡಲಿದ್ದಾರೆ. ಸಿದ್ದಗಂಗಾ ಮಠಾಧ್ಯಕ್ಷ ಸಿದ್ದಲಿಂಗ ಸ್ವಾಮೀಜಿ, ಕಿರಿಯ ಶ್ರೀಗಳಾದ ಶಿವಸಿದ್ದೇಶ್ವರ ಸ್ವಾಮಿಗಳು ಸಾನ್ನಿಧ್ಯ ವಹಿಸಲಿದ್ದಾರೆ.

ಡಿಜಿಪಿ ವಜಾ ಕೂಡ ಆಗಬಹುದು

ವಿಷಯ ತಿಳಿಯುತ್ತಿದ್ದಂತೆ ತಕ್ಷಣ ಅವರನ್ನ ಅಮಾನತು ಮಾಡಿ ತನಿಖೆ ಮಾಡೋದಕ್ಕೆ ಹೇಳಿದರು. ಆದರೆ ರಾಮಚಂದ್ರ ರಾವ್ ಪ್ರಕರಣ ಸುಳ್ಳು ಅಂತ ಹೇಳಿದ್ದಾರೆ. ಈಗ ಅಮಾನತು ಮಾಡಿದ್ದೇವೆ. ಮುಂದೆ ತನಿಖೆ ಆಗುತ್ತದೆ. ಅದರ ಬೇರೆ ಬೇರೆ ಆಯಾಮಗಳು ಏನಿದೆ ಅದರ ಮೇಲೆ ತನಿಖೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು.

ವರ್ಷ ಪೂರೈಸಿದ ಕೆ.ಶೇಷಾದ್ರಿ

ನಗರಸಭಾಧ್ಯಕ್ಷರಾಗಿ ಸೇವೆ । ನಾಗರೀಕರಿಂದ ಪ್ರಶಂಸೆ । ಕ್ಲೀನ್ ಸಿಟಿ ಕಡೆ ಇಟ್ಟ ದಿಟ್ಟ ಹೆಜ್ಜೆ । ಇ-ಖಾತಗಳ ಸೃಜನೆ, ಆಸ್ತಿ ಮಾಲೀಕರಿಂದ ಪ್ರಶಂಸೆ । ನಗರಾಭಿವೃದ್ಧಿಗಾಗಿ ಪ್ರಗತಿಪರರಿಂದ ಸಲಹೆಗಳ ಆಹ್ವಾನ । ಜ.21ರಂದು ನಾಗರೀಕರಿಗೆ ಕೃತಜ್ಞತಾ ಸಮಾರಂಭ

ರಾಮನಗರ: ಜನ ಸೇವೆಯೇ ಜನಾರ್ಧನ ಸೇವೆ ಎಂಬ ಸಂಕಲ್ಪದೊಂದಿಗೆ 2024ರ ಡಿಸೆಂಬರ್‌ನಲ್ಲಿ ನಗರಸಭಾಧ್ಯಕ್ಷರಾಗಿ ಅಧಿಕಾರವಹಿಸಿಕೊಂಡ ಕೆ. ಶೇಷಾದ್ರಿ (ಶಶಿ) ಒಂದು ವರ್ಷದ ಅಧಿಕಾವಧಿ ಪೂರೈಸಿದ್ದಾರೆ. ಜನನಾಯಕರು ಹೇಗಿರಬೇಕು ಎಂಬ ಪ್ರಶ್ನೆಗೆ ಹತ್ತು ಹಲವು ಹೆಸರುಗಳ ಪೈಕಿ ಕೆ. ಶೇಷಾದ್ರಿ ಪ್ರಥಮ ಸಾಲಿನಲ್ಲಿ ನಿಲ್ಲುತ್ತಾರೆ. ನಗರ ಸಭೆಯ ಆಡಳಿತ ಯಂತ್ರವನ್ನು ಚುರುಕುಗೊಳಿಸಿ ಜನಮನ್ನಣೆಗಳಿಸಿದ್ದಾರೆ. ನಗರದ ನಾಗರೀಕರು ನೀಡಿದ ಸಹಕಾರಕ್ಕೆ ಕೆ.ಶೇಷಾದ್ರಿ ಜ.21ರಂದು ಸಾರ್ಥಕ ಸೇವೆಯ ಸಮರ್ಪಣೆ ಕಾರ್ಯಕ್ರಮದ ಮೂಲಕ ಕೃತಜ್ಞತೆ ಅರ್ಪಿಸಲಿದ್ದಾರೆ.

ತಮ್ಮ ಆಸ್ತಿಗಳಿಗೆ ಇ-ಖಾತಾ ಸೃಜನೆಯಾಗದೆ ಪರದಾಡುತ್ತಿದ್ದ ನಾಗರೀಕರು ಹಿಡಿಶಾಪ ಹಾಕುತ್ತಿದ್ದರು. ಕೆ.ಶೇಷಾದ್ರಿ ಅವರು ನಗರಸಭಾಧ್ಯಕ್ಷರಾಗಿ ಅಧಿಕಾರವಹಿಸಿಕೊಂಡಾಕ್ಷಣದಿಂದ ಇ-ಖಾತಾ ಸೃಜನೆಗೆ ಇದ್ದ ಸಮಸ್ಯೆಗಳ ನಿವಾರಣೆಗೆ ಅಧಿಕಾರಿ ವರ್ಗದೊಂದಿಗೆ ಸಮಾಲೋಚನೆ ನಡೆಸಿದರು. ಇದ್ದ ಸಮಸ್ಯೆಗಳನ್ನು ಹಂತ ಹಂತವಾಗಿ ನಿವಾರಿಸುತ್ತಾ, ಸರ್ಕಾರದ ಮಾರ್ಗಸೂಚಿಗಳನ್ನು ಅನುಸರಿಸಿ ಒಂದು ವರ್ಷದಲ್ಲಿ 8 ಸಾವಿರಕ್ಕೂ ಅಧಿಕ ಇ-ಖಾತಾಗಳನ್ನು ಸೃಜಿಸಿ ಆಸ್ತಿ ಮಾಲೀಕರಲ್ಲಿ ಸಮಾಧಾನ ಮೂಡಿಸಿದ್ದಾರೆ.

ಇಂಜಿನಿಯರಿಂಗ್ ಶಿಕ್ಷಣ ಪೂರೈಸಿರುವ ಕೆ.ಶೇಷಾದ್ರಿ, ನಗರಾಭಿವೃದ್ಧಿಗೆ ತಮ್ಮದೇ ಕಲ್ಪನೆಗಳನ್ನು ಇರಿಸಿಕೊಂಡಿದ್ದಾರೆ. ಸ್ವಚ್ಛ ರಾಮನಗರ ಅವರ ಪ್ರಥಮ ಆದ್ಯತೆ. ಮೊದಲ ಹೆಜ್ಜೆಯಾಗಿ ನಾಗರೀಕರಲ್ಲಿ ತ್ಯಾಜ್ಯ ವಿಲೇವಾರಿ ಬಗ್ಗೆ ಅರಿವು ಮೂಡಿಸಲು ಮುನ್ನುಡಿ ಬರೆದಿದ್ದಾರೆ. ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ನಗರಸಭೆಯಲ್ಲೇ ಹಲವಾರು ಕ್ರಮಗಳನ್ನು ಅನುಷ್ಠಾನಕ್ಕೆ ತಂದಿದ್ದಾರೆ. ಕಸ ಸಂಗ್ರಹದಿಂದ ಅಸಹ್ಯ ಪಡುತ್ತಿದ್ದ ಸ್ಥಳಗಳನ್ನು ಬ್ಲಾಕ್ ಸ್ಪಾಟ್‌ಗಳೆಂದು ಗುರುತಿಸಿ ಅವುಗಳ ಸುಂದರೀಕರಣಕ್ಕೆ ಮುಂದಾಗಿದ್ದಾರೆ. ವೇಸ್ಟ್ ಟು ವಂಡರ್ ಕಲ್ಪನೆಯನ್ನು ಸಾಕಾರಗೊಳಿಸಲು ಆರಂಭಿಸಿದ್ದಾರೆ ಪ್ರಜ್ಞಾವಂತ ನಾಗರೀಕರು ಪ್ರಶಂಸಿದ್ದಾರೆ.

ಮಾದರಿ ನಗರ: ಶಶಿಯವರ ಕನಸು!

ಜಿಲ್ಲಾ ಕೇಂದ್ರ ರಾಮನಗರವನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸುವುದು ಕೆ.ಶೇಷಾದ್ರಿ ಅವರು ಕನಸು. ಈ ನಿಟ್ಟಿನಲ್ಲಿ ಅವರು ಹತ್ತು ಹಲವು ಯೋಜನೆಗಳು ಅವರು ಹೊಂದಿದ್ದಾರೆ. ನಗರದ ಸುತ್ತಲೂ ರಿಂಗ್ (ಹೊರ ವರ್ತುಲ) ರಸ್ತೆ ನಿರ್ಮಾಣ, ನಗರಸಭೆಯನ್ನು ಗ್ರೇಡ್ -2 ಹಂತದಿಂದ ಗ್ರೇಡ್ -1 ಆಗಿ ಮೇಲ್ದರ್ಜೆ ಗೇರಿಸುವುದು, ಕನ್ನಡ ಭವನ ನಿರ್ಮಿಸುವು ದು, ನಗರ ವ್ಯಾಪ್ತಿಯ ಉದ್ಯಾನವನ ಗಳು, ಕೆರೆಗಳ ಅಭಿವೃದ್ಧಿ, ಸುಸ ಜ್ಜಿತ ಪಾರ್ಕಿಂಗ್ ವ್ಯವಸ್ಥೆ, ನಗರವನ್ನು ಗಿಡ-ಮರಗಳಿಂದ ಸುಂದರಗೊಳಿಸಿವುದರ ಬಗ್ಗೆ ಅವರು ಪದೇ ಪದೇ ಸಾರ್ವಜನಿಕ ಸಭೆಗಳಲ್ಲಿ ಪ್ರಸ್ತಾಪಿಸುತ್ತಿದ್ದು, ನಾಗರೀಕರ ಗಮನ ಸೆಳೆದಿದ್ದಾರೆ.

ಹಲವಾರು ಯೋಜನೆಗಳ ನಿಧಿಯನ್ನು ಬಳಸಿಕೊಂಡು ನಗರದಲ್ಲಿ 100 ಕಿ.ಮೀ.ಗೂ ಹೆಚ್ಚು ಉದ್ದದ ರಸ್ತೆ ನಿರ್ಮಾಣದ ಜೊತೆಗೆ ಹದಗೆಟ್ಟ ರಸ್ತೆಗಳನ್ನು ಅಭಿವೃದ್ಧಿ ಮಾಡಿಸಿದ್ದಾರೆ. ಮುಖ್ಯರಸ್ತೆಗಳನ್ನು ಧೂಳು ಮುಕ್ತಗೊಳಿಸಲು ನೀರು ಸಿಂಪಡಿಸುವುದು, ಎಲ್ಲೆಂದರಲ್ಲಿ ಕಸ ಎಸೆಯುವವರ ಮೇಲೆ ನಿಗಾ ಇಡಲು ಸಿಸಿ ಕ್ಯಾಮೆರಾ, ಕಮ್ಯುನಿಟಿ ಮೊಬಿಲೈಸರ್ ಗಳನ್ನಿಟ್ಟು ಮಾಡಿಸಿ ತ್ಯಾಜ್ಯ ವಿಲೇವಾರಿ ವಿಚಾರದಲ್ಲಿ ನಾಗರೀಕರಲ್ಲಿ ಅರಿವು ಮೂಡಿಸುವುದರ ಜೊತೆಗೆ ನಯವಾದ ಎಚ್ಚರಿಕೆಗಳನ್ನು ನೀಡುತ್ತಿದ್ದಾರೆ.

ಸಾಮಾಜಿಕ ಕಳಕಳಿ!

ಬೀದಿ ಬದಿ ವ್ಯಾಪಾರಿಗಳಿಗೆ ಛತ್ರಿ, ವೃತ್ತಿ ನಿರತ ಸವಿತಾ ಸಮಾಜ ಮತ್ತು ಮಡಿವಾಳ ಸಮುದಾಯಕ್ಕೆ ಟೂಲ್ ಕಿಟ್ ನೀಡಲಾಗಿದೆ. ಪೌರ ಕಾರ್ಮಿಕರ ಮನೆ ದುರಸ್ತಿಗೆ ಸಹಾಯಧನ, ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ವಿದ್ಯಾರ್ಥಿ ವೇತನ ಸೇರಿ ಹಲವು ಸೌಲಭ್ಯ ವಿತರಿಸಲಾಗಿದೆ. ಮನೆ ಮನೆಗೆ ಇ - ಖಾತಾ ಅಭಿಯಾನ ಯಶಸ್ವಿಯಾಗಿ ಮುಂದುವರೆದಿದೆ. ನಗರ ಸಭೆ ಆವರಣದಲ್ಲಿ 3 ಡಿ ರೂಪದಲ್ಲಿ ಸಂವಿಧಾನದ ಪೀಠಿಕೆ ಅನಾವರಣ ಮಾಡಿದ್ದೇವೆ. ಕನ್ನಡ ರಾಜ್ಯೋತ್ಸವ ಪ್ರಯುಕ್ತ ರೇಷ್ಮೆನಾಡ ಕನ್ನಡ ಹಬ್ಬದಲ್ಲಿ ಮಾಜಿ ಶಾಸಕ ಸಿ.ಎಂ.ಲಿಂಗಪ್ಪ ಅವರಿಗೆ ನಾಗರೀಕ ಸನ್ಮಾನ ಹಾಗೂ 17 ಮಂದಿ ಸಾಧಕರಿಗೆ ಶ್ರೀ ಕೆಂಗಲ್ ಹನುಮಂತಯ್ಯ ಪ್ರಶಸ್ತಿ ನೀಡಿ ಗೌರವಿಸಿರುವುದು ಐತಿಹಾಸಿಕ ದಾಖಲೆಯಾಗಿದೆ. ಇದನ್ನು ಮುಂದುವರೆಸಿಕೊಂಡು ಹೋಗಲು ನಿರ್ಧರಿಸಲಾಗಿದೆ ಎಂದರು.

> ಕಳೆದೊಂದು ವರ್ಷದಲ್ಲಿ ನಗರ ಸಭೆಯ ಬಜೆಟ್ ನಲ್ಲಿ ಘೋಷಣೆ ಮಾಡಿದ್ದ ಕಾರ್ಯಕ್ರಮಗಳಲ್ಲಿ ಶೇಕಡ 70ರಷ್ಟನ್ನು ಕಾರ್ಯಗತಗೊಳಿಸಿದ್ದೇವೆ. ಇದಕ್ಕೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಸಂಸದ ಡಿ. ಕೆ.ಸುರೇಶ್ , ಶಾಸಕ ಇಕ್ಬಾಲ್ ಹುಸೇನ್ , ನಗರದ ನಾಗರೀಕರು, ನಗರಸಭಾ ಸದಸ್ಯರು ಹಾಗೂ ಅಧಿಕಾರಿ ವರ್ಗ ಕಾರಣ. ಇದೀಗ ಮಾದರಿ ನಗರವಾಗಿ ರೂಪಿಸುವ ಕನಸಿನೊಂದಿಗೆ ಹೊಸ ಹೆಜ್ಜೆ ಇಡುತ್ತಿದ್ದೇವೆ.
> ▸▸ **ಕೆ.ಶೇಷಾದ್ರಿ** ನಗರಸಭಾಧ್ಯಕ್ಷರು

ವಿದ್ಯಾರ್ಥಿಗಳಿಗೂ ಸಹಕಾರ!

ಯುವಜನರಿಗೆ ವೃತ್ತಿಪರ ಶಿಕ್ಷಣಕ್ಕೆ ನೆರವಾಗಲು ವೃತ್ತಿಪರ ಕೋರ್ಸ್ ಗಳ ಪರೀಕ್ಷೆಗಳಾದ ಸಿಇಟಿ, ಜೆಇಇ, ನೀಟ್ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತವಾಗಿ ತರಬೇತಿ ನೀಡಲಾಗಿದೆ. ಕೋಮು ಸಾಮರಸ್ಯವನ್ನು ಮತ್ತಷ್ಟು ಬೆಸೆದು ಸೌಹಾರ್ದತೆ ಕಾಪಾಡುವ ನಿಟ್ಟಿನಲ್ಲಿ ಶ್ರೀ ಚಾಮುಂಡೇಶ್ವರಿ ಕರಗ ಮಹೋತ್ಸವ ಆಯೋಜನೆ ಮಾಡಿದ್ದೇವೆ. ನಾಗರೀಕರಿಗೆ ಮೂಲ ಸೌಕರ್ಯ ಕಲ್ಪಿಸುವುದು ಸೇರಿದಂತೆ ಹಲವು ವಿಷಯಗಳಲ್ಲಿ ಮೈಲುಗಲ್ಲು ಸ್ಥಾಪಿಸಿದ್ದೇವೆ ಎಂದು ಕೆ.ಶೇಷಾದ್ರಿ ಸಾರ್ಥಕ ಭಾವ ವ್ಯಕ್ತಪಡಿಸಿದರು.

ಗ್ರೇಟರ್ ಮೈಸೂರಿಗೆ ಸಾವಿರ ಕೋಟಿ ಅನುದಾನಕ್ಕೆ ಮನವಿ

ಮೈಸೂರು: ಗ್ರೇಟರ್ 1 ಮೈಸೂರು ಮಹಾನಗರ ಪಾಲಿಕೆ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರದಿಂದ ಬಜೆಟ್‌ನಲ್ಲಿ ಸಾವಿರ ಕೋಟಿ ರೂ. ಅನುದಾನ ನೀಡುವಂತೆ ಮೈಸೂರು ಕಾಂಗ್ರೆಸ್ ನಿಯೋಗ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಸಮ್ಮುಖದಲ್ಲಿ ಬೃಹತ್ ಮೈಸೂರು ಮಹಾನಗರ ಪಾಲಿಕೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರದಿಂದ ಅನುದಾನ ಪಡೆಯಲು ಹಾಗೂ ಸಮಸ್ಯೆಗಳನ್ನು ಚರ್ಚಿಸಲು ಕುರಿತು ಕಾಂಗ್ರೆಸ್ ನಿಯೋಗ ಜಿಲ್ಲಾಧಿಕಾರಿಗಳ ಜೊತೆ ಸಭೆ ನಡೆಸಿದರು.

ಈ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಮೈಸೂರಿನ ಮೂಲ ಸೌಕರ್ಯ ಅಭಿವೃದ್ಧಿಗೆ ಹೆಚ್ಚು ಒತ್ತನ್ನು ನೀಡ ಬೇಕಿದೆ. ಗ್ರೇಟರ್ ಮೈಸೂರು ಅಭಿವೃದ್ಧಿಯ ದೃಷ್ಟಿಯಿಂದ ಆಸ್ಪತ್ರೆಗಳು, ಶಾಲೆಗಳು, ಸರ್ಕಾರಿ ಕಛೇರಿಗಳು, ಪೊಲೀಸ್ ಠಾಣೆಗಳು ಹೆಚ್ಚು ಮಾಡಬೇಕಾದ ಕಾರಣ ತತ್ ಕ್ಷಣವೇ ಮೈಸೂರಿನ ಅಭಿವೃದ್ಧಿ ಪ್ರಾಧಿಕಾರ, ಸಿಎ ನಿವೇಶನಗಳನ್ನು ಈಗಲೇ ಗುರುತಿಸಿ ಕಾಯ್ದಿರಿಸ ಬೇಕಾಗಿದೆ ಎಂದರು.

ನಾನು ಶಾಸಕನಾಗಿದ್ದಾಗ ಮೈಸೂರಿನ ಸೂಯೇಜ್ ಫಾರಂನ ಅಭಿವೃದ್ಧಿ ಮಡಿದ್ದು, ಬಿಟ್ಟರೆ ನಂತರದ ಅವಧಿಯಲ್ಲಿ ಯಾವ ಪ್ರಗತಿ ಕ್ರಮವು ಆಗಿಲ್ಲ. ಈಗಾಗಲೇ ಮೈಸೂರು ನಗರದ ಕಸ ವೆಲ್ಲಾ ಸೂಯೇಜ್ ಕಸದ ಪ್ಲಾಂಟ್‌ನಲ್ಲಿ ಚಾಮುಂಡಿ ಬೆಟ್ಟವನ್ನು ಮೀರಿಸುವಷ್ಟು ಎತ್ತರಕ್ಕೆ ಸಂಗ್ರಹವಾಗುತ್ತಿದ್ದು ಕೆಸರೆ ಮತ್ತು ರಾಯನಕೆರೆ ಹೊರತು ಪಡಿಸಿ ಬೇರೆಲ್ಲೂ ಸ್ಥಳ ನಿಗದಿ ಪಡಿಸಿಲ್ಲ. ಗ್ರೇಟರ್ ಮೈಸೂರು ರಚನೆ ಯಾದ ಮೇಲೆ ಮತ್ತಷ್ಟು ಗ್ರಾಮಗಳು, ಹೊರವಲಯ ಗಳು ಸೇರ್ಪಡೆ ಆದರೆ ಹೆಚ್ಚು ಹೆಚ್ಚು ಕಸ ಉತ್ಪಾದನೆಯಾಗಲಿದ್ದು ಮತ್ತಷ್ಟು ಕಸದ ಸಮಸ್ಯೆ ಬಿಗುಡಾಯಿಸುವ ಸಾಧ್ಯತೆ ಹೆಚ್ಚು.ಆದ್ದರಿಂದ ಉದ್ದೇಶಿತ ಪೆರಿಫೆರಲ್ ರಿಂಗ್ ರಸ್ತೆಯಿಂದಾಚೆಗೂ ಕಸ ಸಂಸ್ಕರಣೆ ಘಟಕಗಳು ನಿರ್ಮಾಣವಾಗಬೇಕಿದೆ ಎಂದು ತಿಳಿಸಿದರು.

ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಮಾತನಾಡಿ, ಮೊದಲು ಚಾಮುಂಡಿ ಬೆಟ್ಟದಲ್ಲಿ ನಡೆಯುತ್ತಿರುವ ಕಾಮಗಾರಿಯನ್ನು ಕೈಬಿಡಿ. ಬೆಟ್ಟದ ಸುತ್ತಲೂ ನಡೆಯುತ್ತಿರುವ ಅಕ್ರಮ ಕಟ್ಟಡಗಳ ನಿರ್ಮಾಣವನ್ನು ತಡೆಯಬೇಕು. ಚಾಮುಂಡಿಬೆಟ್ಟವನ್ನು ಕಡ್ಡಾಯವಾಗಿ ಬೃಹತ್ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿಸಿ ಎಂದು ಮನವಿ ಮಾಡಿದರು. ಜಿಪಂ ಮಾಜಿ ಸದಸ್ಯ ರಾಕೇಶ್ ಪಾಪ್ಪಣ್ಣ ಮಾತನಾಡಿ, ಬೃಹತ್ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಕಳಸ್ತವಾಡಿ, ಲಕ್ಷ್ಮಿಪುರಂ ಸೇರಿ ವರುಣಾ ಕ್ಷೇತ್ರದ ಕೆಲವು ಗ್ರಾಮಗಳನ್ನು ಸೇರಿಸಿ ಎಂದು ಆಗ್ರಹಿಸಿದರು. ಸಭೆಯಲ್ಲಿ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ರಕ್ಷಿತ್,ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಅಸೀಫ್ ,ಕೆಪಿಸಿಸಿ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಗ್ಯಾರಂಟಿ ಅನುಷ್ಠಾನ ಸಮಿತಿ ಮೈಸೂರು ಜಿಲ್ಲಾ ಅಧ್ಯಕ್ಷ ಅರುಣ್ ಕುಮಾರ್, ಜಿಪಂ ಅಧ್ಯಕ್ಷ ಬಿ.ಎಂ.ರಾಮು, ಪಾಲಿಕೆ ಮಾಜಿ ಸದಸ್ಯರಾದ ಕೆ.ವಿ.ಮಲ್ಲೇಶ್, ಶೌಕತ್ ಪಾಷಾ, ಭಾಸ್ಕರ್,ಕಾಂತರಾಜು, ಯುವಕಾಂಗ್ರೆಸ್ ಅಧ್ಯಕ್ಷರಾದ ಅಬ್ರಾರ್, ಮಹೇಶ್,ಮನೋಮ್ಮಣಿ ಮತ್ತಿತರರು ಉಪಸ್ಥಿತರಿದ್ದರು.

ಹಲವು ಬೇಡಿಕೆಗಳ ಮಂಡನೆ

ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿ, ಬೃಹತ್ ಮೈಸೂರು ಮಹಾನಗರ ಪಾಲಿಕೆ ಎಂದು ಜ.8ರಂದು ಅಧಿಕೃತವಾಗಿ ಗೆಜೆಟ್ ನೋಟಿಫಿಕೇಷನ್ ಹೊರಡಿಸಿರುವುದು ಸಂತಸದ ವಿಚಾರ. ಆದರೆ, ಹಾಲಿ 56 ಕಿಮಿ ವ್ಯಾಪ್ತಿಯ ಮೈಸೂರು ಮಹಾನಗರ ಪಾಲಿಕೆಯನ್ನು 341.44 ಚದರ ಕಿಮಿ ವ್ಯಾಪ್ತಿಯಾಗಿ ವಿಸ್ತರಿಸುತ್ತಿರುವುದ ರಿಂದ ಅಭಿವೃದ್ಧಿಗಾಗಿ ಬಜೆಟ್‌ನಲ್ಲಿ ಮೊದಲ ಹಂತದಲ್ಲಿ 1 ಸಾವಿರ ಕೋಟಿ ಕನಿಷ್ಠ ಮೀಸಲಿಡಬೇಕು. ಸೀವೆಜ್ ಟ್ರೀಟ್ಮೆಂಟ್ ಪ್ಲಾಂಟ್ ಈಗಾಗಲೇ 4 ಇದ್ದು, ಅದಕ್ಕೆ ಹೆಚ್ಚುವರಿಯಾಗಿ 4 ಸೇರ್ಪಡೆ ಮಾಡಬೇಕು. ಇಲ್ಲದಿದ್ದರೆ ಬೆಂಗಳೂರಿನ ಸ್ಥಿತಿ ಬರುತ್ತದೆ. ಈಗ ಪಾಲಿಕೆ 1,200 ಕಿಮೀ ರಸ್ತೆ ಬರಲಿದ್ದು, ರಸ್ತೆ ನಿರ್ಮಾಣಕ್ಕೆ ಯೋಜನೆ ರೂಪಿಸಿ, ಸೀವೇಜ್ ಲೈನ್, ಡ್ರೈನೇ ಜ್, ಪೈಪ್ ಲೈನ್ ಹೆಚ್ಚಿಸಬೇಕು. ಕಸ ಸಂಗ್ರಹ ಘಟಕ ಹೆಚ್ಚಿಸಬೇಕು. ಶಾಲಾ-ಕಾಲೇಜಿಗೆ ಹಾಗೂ ಮೈದಾನಕ್ಕೆ ಜಾಗ ಇಲ್ಲ. ಅದಕ್ಕೆ ಜಾಗ ಗುರುತಿಸು ವಂತೆ ಸಲಹೆ ನೀಡಿದರು. ವಾರ್ಡ್‌ಗಳ ಸಂಖ್ಯೆ 120ಕ್ಕೆ ಹೆಚ್ಚಿಸಬೇಕು.20 ವಲಯ ಕಚೇರಿಗಳು, ಕುಡಿಯುವ ನೀರಿಗಾಗಿ ಓವರ್ ಹೆಡ್ ಟ್ಯಾಂಕ್ ನಿರ್ಮಿಸಬೇಕು. ಬೃಹತ್ ಬಸ್ ಡಿಪೊ ಆಗ ಬೇಕು. ಪಾರ್ಕಿಂಗ್ ದೊಡ್ಡ ಸಮಸ್ಯೆಯಾಗುತ್ತಿದ್ದು, ಅದಕ್ಕೆ ಜಾಗ ಗುರುತಿಸಬೇಕು. ಪೊಲೀಸ್ ಠಾಣೆಗಳಿಗೆ, ಸರ್ಕಾರಿ ಆಸ್ಪತ್ರೆಗಳಿಗೆ ಜಾಗ ಒದಗಿಸಬೇಕು ಎಂದರು.

ಯುಜಿಡಿ ಸಮಸ್ಯೆಗೆ ಮೊದಲ ಆದ್ಯತೆ: ಜಿಲ್ಲಾಧಿಕಾರಿ

ಮೈಸೂರು: ಅನೇಕ ಗ್ರಾಮಾಂತರ ಪ್ರದೇಶಗಳು ಬೃಹತ್ ಮೈಸೂರು ಪಾಲಿಕೆ ಅಡಿ ಬರುವುದರಿಂದ ಪ್ರಮುಖವಾಗಿ ಅಲ್ಲಿ ಯುಜಿಡಿ ಸಮಸ್ಯೆ ಹೆಚ್ಚಳವಾಗಿ ಕಂಡು ಬಂದಿದೆ. ಅದಕ್ಕೆ ಮೊದಲ ಆದ್ಯತೆ ನೀಡಿದ್ದೇವೆ ಎಂದು ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ

ರಾಜ್ಯ ಸರ್ಕಾರ ಕ್ರೀಡೆಗೆ ಹೆಚ್ಚಿನ ಒತ್ತು ನೀಡಿದೆ: ಎಆರ್‌ಕೆ

ಚಾಮರಾಜನಗರ : ದೇಶದಲ್ಲಿ 2036 ಇಸವಿಗೆ ಒಲಂಪಿಕ್ ಕ್ರೀಡಾಕೂಟವನ್ನು ನಡೆಸಲು ಅವಕಾಶ ಮಾಡಿಕೊಡುವಂತೆ ಕೇಂದ್ರ ಸರ್ಕಾರ ಒಲಂಪಿಕ್ ಸಂಸ್ಥೆಗೆ ಮನವಿ ಮಾಡಿಕೊಂಡಿದೆ.ರಾಜ್ಯ ಸರ್ಕಾರ ಕ್ರೀಡೆಗೆ ಹೆಚ್ಚಿನ ಒತ್ತು ನೀಡಿದೆ ಎಂದು ಕೊಳ್ಳೇಗಾಲ ಕ್ಷೇತ್ರದ ಶಾಸಕ ಎ.ಆರ್.ಕೃಷ್ಣಮೂರ್ತಿ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಚಾಮರಾಜನಗರ ಜಿಲ್ಲಾ ಬಾಲ್ ಬ್ಯಾಡ್ಮಿಂಟನ್ ಅಸೋಸಿಯೇಷನ್, ಬಾಲ್ ಬ್ಯಾಡ್ಮಿಂಟನ್ ಅಸೋಸಿಯೇಷನ್ ಆಫ್ ಕರ್ನಾಟಕ ಇವರ ಸಹಯೋಗದಲ್ಲಿ ಎರಡು ದಿನಗಳ ಕಾಲ ಅಯೋಜಿಸಿರುವ ಕರ್ನಾಟಕ ರಾಜ್ಯ ಮಟ್ಟದ ಜೂನಿಯರ್ಸ್ ಬಾಲಕ ಹಾಗೂ ಬಾಲಕಿಯರ ಬಾಲ್ ಬ್ಯಾಡ್ಮಿಂಟನ್ ಲೀಗ್ ಚಾಂಪಿಯನ್ ಶಿಪ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದರು.

ರಾಜ್ಯಮಟ್ಟದ ಬಾಲ್-ಬ್ಯಾಡ್ಮಿಂಟನ್ ಲೀಗ್ ಚಾಂಪಿಯನ್‌ಶಿಪ್ ಪಂದ್ಯಾವಳಿಗೆ ಚಾಲನೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ ಜಿಲ್ಲಾ ಕೇಂದ್ರದಲ್ಲಿ ಈಜುಕೊಳ ಮಂಜೂರು ಮಾಡಿದ್ದಾರೆ. ಅವರಿಗೆ ಜಿಲ್ಲೆಯ ಜನತೆಯ ಪರವಾಗಿ ಈ ಮೂಲಕ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಜಿಲ್ಲೆಯಲ್ಲಿ ಮೂವರಿಗೆ ರಾಷ್ಟ್ರ ಮಟ್ಟದ ಏಕಲವ್ಯ ಪ್ರಶಸ್ತಿ ಲಭಿಸಿದೆ. ಇತ್ತೀಚಿಗೆ ನಡೆದ ರಾಷ್ಟ್ರೀಯ ಮಟ್ಟದ ಖೋಖೋ ಪಂದ್ಯಾವಳಿಯಲ್ಲಿ ಸಿದ್ಧಯ್ಯನಪುರ ಚಂದನ್ ವಿಜೇತರಾಗಿ ಜಿಲ್ಲೆಗೆ ಕೀತಿ ತಂದಿದ್ದಾನೆ. ಗ್ರಾಮೀಣ ಪ್ರದೇಶದ ಮಕ್ಕಳಿಗೂ ಕ್ರೀಡಾ ತರಬೇತಿ ಕೊಟ್ಟರೆ ಉತ್ತಮವಾಗಿ ಹೊರಹೊಮ್ಮುತ್ತಾರೆ ಎಂಬುವುದಕ್ಕೆ ಇವರು ಒಂದು ನಿದರ್ಶನವಾಗಿದೆ. ಕ್ರೀಡೆಯು ಮಾನಸಿಕ, ಮಾನಸಿಕ ಆರೋಗ್ಯಕ್ಕೆ ಮುಖ್ಯವಾಗಿದೆ ಎಂದು ಕ್ರೀಡಾಪಟುಗಳಿಗೆ ಶುಭಕೋರಿದರು.

ಅಸೋಸಿಯೇಷನ್ ಉಪಾಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಪ್ರಾಸ್ತಾವಿಕವಾಗಿ ಮಾತನಾಡಿ, ಜಿಲ್ಲೆಯು ಬಾಲ್ ಬ್ಯಾಡ್ಮಿಂಟನ್ ಕ್ರೀಡಾಪಟು ಗಳ ತವರೂರಾಗಿದೆ. ಬಾಲ್ ಬ್ಯಾಡ್ಮಿಂಟನ್ ಕ್ರೀಡೆಯನ್ನು ಒಲಂಪಿಕ್ಸ್ ಕ್ರೀಡೆ ಗೆ ಸೇರಿಸಬೇಕು ಎಂದು ಶಾಸಕರಲ್ಲಿ ಮನವಿ ಮಾಡಿದರು.

ಉಪಾಧ್ಯಕ್ಷ ವಿ.ಶ್ರೀನಿವಾಸಪ್ರಸಾದ್ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಶಾಶ್ವತವಾದ ಕ್ರೀಡಾ ಅಂಕಣ, ಕುಡಿಯುವ ನೀರು, ವ್ಯವಸ್ಥೆ, ಷಟಲ್ ಬ್ಯಾಡ್ಮಿಂಟನ್ ಸಿಂಥೆಟಿಕ್ ಮ್ಯಾಟ್ ಅಳವಡಿಸಿಕೊಡಬೇಕು ಎಂದು ಮನವಿ ಮಾಡಿದರು. ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಸುರೇಶ್ ,ಉದ್ಯಮಿ ಶ್ರೀನಿಧಿಕುದರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಅಸೋಸಿಯೇಷನ್ ಖಜಾಂಚಿ ಮಹದೇವು, ಏಕಲವ್ಯ ಪ್ರಶಸ್ತಿ ಪುರಸ್ಕೃತ ಸುದರ್ಶನ, ನಿವೃತ್ತ ದೈಹಿಕ ಶಿಕ್ಷಕ ಎಂ.ಮಲ್ಲಪ್ಪ, ತಾಲೂಕು ದೈಹಿಕ ಶಿಕ್ಷಕ ಸಂಘದ ಅಧ್ಯಕ್ಷ ಚಿಕ್ಕಬಸವಯ್ಯ , ಕೆಇಬಿ ಲೆಕ್ಕಾಧಿಕಾರಿ ಎನ್.ಮಹೇಶ್, ಅಸೋಸಿಯೇಷನ್ ಅಧ್ಯಕ್ಷ ಎಂ.ವಿಮಲ್ ರಾಜ್, ಪ್ರಧಾನ ಕಾರ್ಯದರ್ಶಿ ಡಿ.ಮಲ್ಲೇಶ್, ಗಿರೀಶ್ ಪೊಲೀಸ್, ಹೇಮಂತ್, ರಾಜೀವ್, ಮಂಜುನಾಥ್ ಹರದನಹಳ್ಳಿ,ಮೈಕಲ್, ಯಶವಂತ, ಲೋಕೇಶ್, ನವೀನ್, ಮನೋಜ್ ಹಾಗೂ ಕ್ರೀಡಾ ಪಟುಗಳು, ಕ್ರೀಡಾಭಿಮಾನಿಗಳು, ಭಾಗವಹಿಸಿದ್ದರು.

ಬಿಜೆಪಿ ರಾಜ್ಯಕ್ಕೆ ಬಗೆದ ದ್ರೋಹ ಸಾಬೀತು: ಬಿ.ಸುಬ್ರಹ್ಮಣ್ಯ ಕಿಡಿ

ಮೈಸೂರು: ಕೇಂದ್ರ ಬಿಜೆಪಿ ಸರ್ಕಾರ ರಾಜ್ಯಕ್ಕೆ ಮಾಡುತ್ತಿರುವ ದ್ರೋಹ ಮತ್ತೆ ಸಾಬೀತಾಗಿದೆ. 3ನೇ ಬಾರಿಗೆ ನರೇಂದ್ರ ಮೋದಿ ಪ್ರಧಾನಿಯಾದರೂ ತಮ್ಮ ಬುಡಕ್ಕೆ ಕುತ್ತು ಬರುತ್ತದೆ ಅನ್ನೋ ಕಾರಣಕ್ಕೆ ಹೆಚ್ಚಿನ ಅನುದಾನವನ್ನ ಆಂಧ್ರ, ಬಿಹಾರಕ್ಕೆ ಕೊಟ್ಟು ಕರ್ನಾಟಕಕ್ಕೆ ದ್ರೋಹ ಬಗೆದಿದ್ದಾರೆ. ಇವರಿಗೆ ಸಿದ್ರಾಮಯ್ಯ ಸರ್ಕಾರದ ಬಗ್ಗೆ ಮಾತನಾಡುವ ಯಾವ ನೈತಿಕತೆಯಿದೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ. ಸುಬ್ರಹ್ಮಣ್ಯ ಪ್ರಶ್ನಿಸಿದರು.

ಎನ್‌ಡಿಎ ಸರ್ಕಾರ ರಚನೆಗೆ ಸಾಥ್ ಕೊಟ್ಟಿದ್ದಾರೆ ಅನ್ನೋ ಒಂದೇ ಕಾರಣಕ್ಕೆ ಕೇಂದ್ರ ಸರ್ಕಾರ ಈ ಅವಧಿಯಲ್ಲಿ ಆಂಧ್ರ, ಬಿಹಾರಕ್ಕೆ ತಲಾ 1 ಲಕ್ಷ ಕೋಟಿಗೂ ಅಧಿಕ ಅನುದಾನ ಕೊಟ್ಟಿದೆ. ಆದ್ರೆ ಕರ್ನಾಟಕದಿಂದ 17 ಬಿಜೆಪಿ ಸಂಸದರನ್ನ ಕೊಟ್ಟಿದ್ದರೂ, 17 ತಿಂಗಳಲ್ಲಿ ಕೇವಲ 3,432 ಕೋಟಿ ಮೊತ್ತದ 2 ಯೋಜನೆಗಳಿಗಷ್ಟೇ ಅನುಮೋದನೆ ಕೊಟ್ಟಿದೆ. ಅದ್ರಲ್ಲೂ 3ನೇ ಹಂತದ ಮೆಟ್ರೋ ಯೋಜನೆಯ ಬಹುಪಾಲು ಅನುದಾನ ರಾಜ್ಯ ಸರ್ಕಾರವೇ ಬರಿಸಿದೆ. ಸಾಲದ್ದಕ್ಕೆ ವಿತ್ತ ಸಚಿವರನ್ನ ಕರ್ನಾಟಕದಿಂದ ಆಯ್ಕೆ ಮಾಡಲಾಗಿದೆ. ಹೀಗಿದ್ದೂ ಬಿಜೆಪಿ ಸಂಸದರು ತನ್ನದೇ ಸರ್ಕಾರದ ಮಲತಾಯಿ ಧೋರಣೆ ಬಗ್ಗೆ ಸೊಲ್ಲೆತ್ತದಿರುವುದು ನಾಚಿಗೇಡಿನ ಸಂಗತಿ ಎಂದರು.

ಮನ್ರೇಗಾ ಹೆಸರು ಬದಲಾವಣೆ ಮಾಡಿ ಮಹಾತ್ಮ ಗಾಂಧಿಗೆ ಅಪಮಾನ ಮಾಡಿತು. ನರೇಗಾ ಅನುದಾನ ಕಡಿತಗೊಳಿಸಿ ಕೂಲಿ ಕಾರ್ಮಿಕರಿಗೆ ಅನ್ಯಾಯ ಮಾಡಿತು. ಅಧಿವೇಶನದಲ್ಲಿ ದೆಹಲಿ ವಾಯುಮಾಲಿನ್ಯ ನಿಯಂತ್ರಿಸಲು ಒಟ್ಟಾಗಿ ಕೆಲಸ ಮಾಡೋಣ ಅಂತ ರಾಹುಲ್ ಗಾಂಧಿ ಅವರು ಹೇಳಿದಾಗ ಮೋದಿಗೆ ಬಾಯೇ ಬರಲಿಲ್ಲ. ಬಿಜೆಪಿ ಆಡಳಿತದಲ್ಲಿರುವ ಮಧ್ಯಪ್ರದೇಶ ಆರ್ಥಿಕ ದಿವಾಳಿಯತ್ತ ಸಾಗುತ್ತಿದೆ. ಅದರ ಬಗ್ಗೆ ಮಾತೂ ಆಡಲ್ಲ. ಭಾರತ-ಪಾಕ್ ಕದನ ವಿರಾಮದ ಬಗ್ಗೆ ಚೀನಾ ಹೇಳಿಕೆ ಕೊಟ್ಟರೂ, ಕಣ್ಣಿದ್ದೂ ಕುರುಡರಂತೆ ವರ್ತಿಸುತ್ತಾರೆ. ಈಗ ಮತ್ತೆ ಮೆಟ್ರೋ ದರ ಏರಿಕೆ ಮಾಡಿ ರಾಜ್ಯದ ಜನರ ತಲೆ ಮೇಲೆ ಚಪ್ಪಡಿ ಎಳೆಯಲು ಕಾಯ್ತಿದ್ದಾರೆ. ಕೇಂದ್ರದ ಅನ್ಯಾಯಗಳು ಸಾಲು ಸಾಲಾಗಿ ಕಣ್ಣಿಗೆ ಬೀಳುತ್ತಿದ್ದರೂ ಇಲ್ಲಿನ ಬಿಜೆಪಿ ನಾಯಕರು ಬಾಯಿ ಮುಚ್ಚಿಕೊಂಡು ಕುಳಿತಿದ್ದಾರೆ. ಸಣ್ಣ ಸಣ್ಣ ವಿಚಾರಗಳನ್ನ ತೆಗೆದುಕೊಂಡು ಕೋಮುದ್ವೇಷ ಸೃಷ್ಟಿಸಿ ರಾಜ್ಯದ ಶಾಂತಿ ಹಾಳು ಮಾಡುತ್ತಿದ್ದಾರೆಂದರು.

ಬಿಜೆಪಿಯವರಿಗೆ ಈಗಲಾದ್ರೂ ಮನಃಸಾಕ್ಷಿ ಅನ್ನೋದು ಇದ್ದರೆ ತಮ್ಮ ಕೇಂದ್ರದ ನಾಯಕರನ್ನ ಪ್ರಶ್ನೆ ಮಾಡಿ, ರಾಜ್ಯಕ್ಕೆ ಆಗುತ್ತಿರುವ ಅನ್ಯಾಯವನ್ನು ತಡೆಯಿರಿ. ಈ ಬಾರಿ ಬಜೆಟ್‌ನಲ್ಲಾದ್ರೂ ರಾಜ್ಯಕ್ಕೆ ಬರಬೇಕಾದ ನ್ಯಾಯಯುತ ಪಾಲನ್ನೂ ತನ್ನಿ, ಭಾವನೆಗಳ ಮೇಲೆಯೇ ರಾಜಕಾರಣ ಮಾಡೋದು ಬಿಡಿ ಎಂದರು.

ಯುವಸಮೂಹ ಕನ್ನಡ ವಿವೇಕವನ್ನು ಉಳಿಸಲಿ

ಮೈಸೂರು: ಕನ್ನಡ ವಿವೇಕವನ್ನು ಇಂದಿನ ವಿದ್ಯಾರ್ಥಿಗಳು ಹಾಗೂ ಯುವ ಸಮೂಹ ಉಳಿಸಬೇಕು. ಆಗ ಭಾಷೆ, ಸಂಸ್ಕೃತಿ ಉಳಿಯಲಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಹೇಳಿದರು. ನಗರದ ಕಿರುರಂಗಮಂದಿರದ ಆವರಣದಲ್ಲಿ ಧ್ವನಿ ಫೌಂಡೇಷನ್ ಮತ್ತು ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ ಸಹಯೋಗದಲ್ಲಿ ಮಂಗಳವಾರ ನಡೆದ ಕನ್ನಡ ಸಾಹಿತ್ಯ ಪುನರಾವಲೋಕನ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಕನ್ನಡ ಸಾಹಿತ್ಯವು ವಿವೇಕದ ಪರಂಪರೆ ಹೊಂದಿದೆ. ಕಾವ್ಯವನ್ನು ಚರಿತ್ರೆ, ಇತಿಹಾಸವೆಂದು ಓದಬಾರದು. ಕಾವ್ಯದ ಪಾತ್ರ ನೈಜವೆಂದು ಪರಿಗಣಿಸಬಾರದು ಎಂದು ಕನ್ನಡಿಗರ ಭಾಷೆ ಹುಟ್ಟಿನಲ್ಲಿ ಉದಾರವಾಗಿದ್ದರಿಂದ ಕನ್ನಡ ಸಾಹಿತ್ಯ ಮನುಕುಲ ಸಂಬಂಧಪಟ್ಟ ವಿವೇಕವನ್ನು ಮತ್ತೆ ಹೇಳುತ್ತ ಬಂದಿದೆ. ಕುಮಾರವಾಸ್ಯ, ಕನಕದಾಸ, ರತ್ನಕರ್ಣ, ವಚನಕಾರರು ಯಾರನ್ನೇ ಓದಿದರು ಒಂದು ವಿವೇಕ ಇರಲಿದೆ. ಮಾನವ ಜಾತಿ ಒಂದೇ ವಲಂ ಪಂಪ ಹೇಳುತ್ತಾನೆ. ವಚನಕಾರರು, ದಾಸರು ಇದೆ ತತ್ವವನ್ನು ಹೇಳುತ್ತಾರೆ. ಪರಂಪರೆಯ ವಿವೇಕ ಈಗೀನ ಕಾಲಕ್ಕೆ ಶಕ್ತಿಯಾಗಬೇಕು. ಇದನ್ನು ಬಿಟ್ಟರೆ ಅವಿವೇಕವಾಗಿ ವರ್ತಿಸಬೇಕಾಗುತ್ತದೆ. ಆ ವಿವೇಕ ವರ್ತಮಾನಕ್ಕೆ ಉಳಿದಿದೆಯಾ? ನಮ್ಮಲ್ಲಿ ದ್ವೇಷ, ಅಸಹನೆ ಹೆಚ್ಚಾಗಿದೆ ಎಂದು ಹೇಳಿದರು.

ಡಾ.ಪುರುಷೋತ್ತಮ್ ಬಿಳಿಮಲೆ ಕರೆ

ಕಾವ್ಯಗಳನ್ನು ಓದಿದಾಗ ಕಾವ್ಯದ ಪಾತ್ರಗಳನ್ನು ಚರಿತ್ರೆ ಎಂದು ಗ್ರಹಿಸಬಾರದು. ಕಾವ್ಯಪಾತ್ರಗಳನ್ನು ನಿಜವಾಗಿ ಇದ್ದವರು ಎಂದು ವಾದ ಮಾಡುತ್ತೇವೆ. ಕಾವ್ಯದ ಪಾತ್ರಗಳನ್ನೆ ಮುಂದಿಟ್ಟು ರಾಜಕೀಯ ಮಾಡಲಾಗುತ್ತಿದೆ. ರಾಮನ ಹೆಸರಿನಲ್ಲಿ ದೇವಸ್ಥಾನವಾಗಿದೆ. ಈ ರಾಜಕೀಯವನ್ನು ನಾನು ಮಾತನಾಡುವುದಿಲ್ಲ ಎಂದರು. ನೀವು ರಾಮನಿದ್ದನೆಂದು ಒಪ್ಪಿಕೊಂಡರೆ ಹತ್ತು ತಲೆಯ ರಾವಣ ಇದ್ದ ಎಂದು ಒಪ್ಪಿಕೊಳ್ಳಬೇಕು. ಇತಿಹಾಸ ಹತ್ತು ತಲೆ ಇದ್ದವನು ಭೂಮಿ ಮೇಲೆ ಇದ್ದ ಎಂದು ಯಾವ ವಿಜ್ಞಾನಿ, ಇತಿಹಾಸಕಾರರು ಹೇಳಿಲ್ಲ. ಹತ್ತು ತಲೆ ಇದ್ದರೆ ತಲೆ ಬ್ಯಾಲೆನ್ಸ್ ಆಗುವುದಿಲ್ಲ. ಎರಡು ಕಡೆ ಸಮನ ಬಾರವಾಗಿದ್ದರೆ ಮಾತ್ರ ಬ್ಯಾಲೆನ್ಸ್ ಆಗಲಿದೆ. ಇಂತಹ ಕುಚೋದ್ಯದ ಪ್ರಶ್ನೆಗಳನ್ನು ಕೇಳಬಾರದು. ಆದರೆ, ಕವಿಗಳು ಪಾತ್ರ ಕಟ್ಟಿರುವುದರಿಂದ ಒಂದು ವಿವೇಕವಿದೆ ಎಂದು ನೋಡಬೇಕು ಎಂದು ಹೇಳಿದರು. ಕೃಷ್ಣದೇವರಾಯ ವಿಜಯನಗರ ವೈಭವ ಚರಿತ್ರೆಯ ಬಲೂನಿಗೆ ಪಿನ್ನು ಚುಚ್ಚಿದವರು ಕವಿಗಳು. ವಿಜಯನಗರ ವೈಭವವನ್ನು ಪುರಂದಾಸರು ಆನೆ, ಕುದುರೆ, ಒಂಟೆಯಲ್ಲ ಲೋಲಲೋಟೆ ಎಂದು ಟೀಕಿಸಿದರು. ಈಗ ವೈಭವದಿಂದ ಇದ್ದವನಿಗೆ ಮತ್ತೆರಡು ಪದ ಸೇರಿಸಿ ಹೊಗಳುವುದು ಹೆಚ್ಚಾಗಿದೆ. ಆದರೆ, ರಾಜಸ್ಥಾನದಲ್ಲಿದ್ದರು ನಮ್ಮ ಕವಿಗಳು ವೈಭವ ಸಾಮಾಜ್ಯದ ಹುಳುಕುಗಳನ್ನು ತೋರಿಸಿದರು. ಮಾಜಿ ಸಂಸದ ಪ್ರತಾಪಸಿಂಹ, ಬಾಲಕಿಯರ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ನಯನಕುಮಾರಿ, ಕಾಲೇಜಿನ ಪ್ರಾಂಶುಪಾಲೆ ಪ್ರೊ.ಎನ್.ಭಾರತಿ ಹಾಜರಿದ್ದರು.

ಬಲ್ಲೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ

ಕಾಂಗ್ರೆಸ್ ಬೆಂಬಲಿಗ 8 ಅಭ್ಯರ್ಥಿಗಳು ಭರ್ಜರಿ ಗೆಲುವು

ಕೆ.ಆರ್.ಪೇಟೆ,ತಾಲ್ಲೂಕು ಬೂಕನಕೆರೆ ಹೋಬಳಿಯ ಬಲ್ಲೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಆಡಳಿತ ಮಂಡಳಿಗೆ ಇಂದು ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ 8 ಅಭ್ಯರ್ಥಿಗಳು ಭರ್ಜರಿ ಗೆಲುವು ಸಾಧಿಸಿದ್ದಾರೆ. ಜೆಡಿಎಸ್ ಒಂದು ಸ್ಥಾನ ಪಡೆದಿದೆ.

ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಬಲ್ಲೇನಹಳ್ಳಿ ರಮೇಶ್, ಪ್ರಥಮ ದರ್ಜೆ (ವಿದ್ಯುತ್ ಹಾಗೂ ಸಿವಿಲ್) ಗುತ್ತಿಗೆದಾರ ಬಿ.ಎಸ್. ರಾಮು, ಪಿ.ಎಲ್.ಡಿ.ಬ್ಯಾಂಕ್ ಅಧ್ಯಕ್ಷ ಕಬ್ಬಲಗೆರೆಪುರ ಪುಟ್ಟಸ್ವಾಮೀಗೌಡ ನೇತೃತ್ವದಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಭರ್ಜರಿ ಗೆಲುವು ಸಾಧಿಸುವ ಮೂಲಕ ಅಧಿಕಾರದ ಚುಕ್ಕಾಣಿ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಚುನಾವಣೆ ಘೋಷಣೆ ಆಗುತ್ತಿದ್ದಂತೆಯೇ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರು ಪಟಾಕಿ ಸಿಡಿಸಿ, ಸಿಹಿ ವಿತರಣೆ ಮಾಡಿ ವಿಜಯೋತ್ಸವ ಮಾಡಿದರು.

ಗೆಲುವು ಸಾಧಿಸಿ ಕಾಂಗ್ರೆಸ್ ಅಭ್ಯರ್ಥಿಗಳ ವಿವರ: ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳಾದ ಆಡುನಿಂಗಣ್ಣನ ಬಿ.ಆರ್.ಮಹೇಶ್, ಬಿ.ಸಿ. ಅಶೋಕ್, ನಿಂಗೇಗೌಡ, ಉಮಾಶಂಕರ್, ಬಿ.ಎಲ್.ಶಿಲ್ಪಪುಟ್ಟರಾಜು, ಸಾವಿತ್ರಮ್ಮಕೃಷ್ಣೇಗೌಡ, ಬಿ.ಎಸ್.ಪುಟ್ಟರಾಜು, ಹಾಗೂ ನರಸಿಂಹಶೆಟ್ಟಿ ಭರ್ಜರಿಗೆ ಗೆಲುವು ಸಾಧಿಸಿದ್ದಾರೆ. ನೂತನವಾಗಿ ಆಯ್ಕೆಯಾದ ನಿರ್ದೇಶಕರನ್ನು ಅಭಿನಂದಿಸಿ ಕಾಂಗ್ರೆಸ್ ಮುಖಂಡರಾದ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಬಲ್ಲೇನಹಳ್ಳಿ ರಮೇಶ್, ಕಾಂಗ್ರೆಸ್ ಯುವ ಮುಖಂಡ ಪ್ರಥಮ ದರ್ಜೆ (ವಿದ್ಯುತ್ ಹಾಗೂ ಸಿವಿಲ್) ಗುತ್ತಿಗೆದಾರ ಬಿ.ಎಸ್.ರಾಮು, ಪಿ.ಎಲ್.ಡಿ.ಬ್ಯಾಂಕ್ ಅಧ್ಯಕ್ಷ ಕಬ್ಬಲಗೆರೆಪುರ ಪುಟ್ಟಸ್ವಾಮೀಗೌಡ ಮಾತನಾಡಿದರು. ನಮ್ಮ ಕಾಂಗ್ರೆಸ್ ಅಭ್ಯರ್ಥಿ ಕಡಿಮೆ ಅಂತರದಲ್ಲಿ ಸೋತಿದ್ದು ಅವರಿಗೆ ಖಾಲಿ ಇರುವ ಸರ್ಕಾರಿ ನಾಮಿನಿ ಸದಸ್ಯ ಸ್ಥಾನಕ್ಕೆ ನೇಮಕ ಮಾಡಿಸುವ ಮೂಲಕ ಅವರಿಗೆ ನ್ಯಾಯ ಕೊಡಿಸುವ ಮುಖಂಡರಾದ ಬಲ್ಲೇನಹಳ್ಳಿ ರಮೇಶ್ ನೀಡಿದರು.ಗ್ರಾಮದ ಮುಖಂಡರಾದ ಪಟೇಲ್ ಸ್ವಾಮಿಗೌಡ, ಪಟೇಲ್ ಮಹದೇವ್, ಯೋಗಣ್ಣ, ಡೈರಿ ಕುಮಾರ್, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಶೀಳನೆರೆ ರಾಮೇಗೌಡ, ಅಣ್ಣೇಚಾಕನಹಳ್ಳಿ ನಾಗರಾಜು, ಹೊನ್ನೇನಹಳ್ಳಿ ಕೃಷ್ಣೇಗೌಡ, ಕಾಶಿಮುರುಕನಹಳ್ಳಿ ಪ್ರೀತಮ್, ಬಲ್ಲೇನಹಳ್ಳಿ ಪೆಪ್ಸಿ ದಯಾನಂದ್, ಬಿ.ಎನ್.ಮಹೇಶ್, ಜಯರಾಂ, ನಂಜಪ್ಪನ ಕುಮಾರ್, ಶಿವಣ್ಣ, ಸೊಸೈಟಿ ಅಧ್ಯಕ್ಷ ಕುಮಾರ್, ರಾಮಕೃಷ್ಣೇಗೌಡ, ಶ್ರೀನಿವಾಸ್, ಆಡುನಿಂಗಣ್ಣನ ಸ್ವಾಮಣ್ಣ, ಪುಟ್ಟರಾಜು, ದೇವರಸು, ಆನಂದೇಗೌಡ, ಸಿದ್ದಪ್ಪನ ಕೃಷ್ಣೇಗೌಡ, ಸುರೇಶ್ ಬಿ,ಹೇಮಂತ್, ರೇವಣ್ಣ, ಬಾರೆ ತಮ್ಮಣ್ಣ, ನಾಗರಾಜು, ಸೋಮು, ಕಾರ್ತೀಕ್, ಸಂತೋಷ್, ಮೋಹನ್, ಮಹೇಶ್, ರಾಮು, ಕುಮಾರ್, ನಾಗರಾಜು,ದಿನೇಶ್, ಬಸಂತ, ಮಾಜಿ ಅಧ್ಯಕ್ಷೆ ವಿನೋದಮ್ಮ, ನವೀನ್ ಕುಮಾರ್, ಪುಟ್ಟಪ್ಪ ಟೆಂಪೋ, ನ್ಯಾಯ ಬೆಲೆ ಅಂಗಡಿ ರಮೇಶ್, ಕುಮಾರ್, ಶಿವಲಿಂಗಣ್ಣ, ರಾಮಣ್ಣ, ಮಂಡಿ ಮಹದೇವ್, ಕೆ ಟಿ ಕುಮಾರ್, ಸುಬ್ಬಣ್ಣ ಸುಧಾಕರ್, ವಿಶ್ವನಾಥ್, ರೂಪೇಶ್, ಗಣೇಶ್, ಕಟ್ಟೇರಿ ಚಂದ್ರು, ಸತೀಶ್, ಶಾಂತ,ಕರುಣಾಕರ, ಹೇಮಂತ್ ಗೌಡ, ಸೇರಿದಂತೆ ಗ್ರಾಮದ ಹಿರಿಯ ಮುಖಂಡರು, ಯುವಕರು ಸೇರಿದಂತೆ ಇತರರು ಹಾಜರಿದ್ದರು. ಚುನಾವಣಾಧಿಕಾರಿಯಾಗಿ ವಾಸಿಂಪಾಷಾ ಕಾರ್ಯನಿರ್ವಹಣೆ ಮಾಡಿದರು.

ಎಚ್.ಡಿ.ಕೋಟೆ: ಪಟ್ಟಣದ ಕೆ.ಎಸ್.ಆರ್.ಟಿ.ಸಿ ಬಸ್ ಡಿಪೋ ಸಮೀಪದ ಶ್ರೀಮಲೆಮಹದೇಶ್ವರ ಜಾತ್ರೆ ಪ್ರಯುಕ್ತ ದೇವಸ್ಥಾನ ಆವರಣದಲ್ಲಿ ಏರ್ಪಡಿಸಿದ್ದ ಅನ್ನಸಂತರ್ಪಣೆಯಲ್ಲಿ ತಾಲೂಕಿನ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಭಕ್ತರು ಪ್ರಸಾದ ಸ್ವೀಕರಿಸಿದರು.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋಕೋಪಯೋಗಿ, ಇಲಾಖೆ ವಿಭಾಗ, ಮಂಡ್ಯ

ಸಂ: 16/2025-2026 ದಿನಾಂಕ: 20-01-2026

ಮಂಡ್ಯ ಜಿಲ್ಲೆಯ ಕಾಮಗಾರಿಗಾಗಿ ಅಲ್ಪಾವಧಿ ಟೆಂಡರ್ ಪ್ರಕಟಣೆ

ಐಟಂವಾರು ದರದ ಟೆಂಡರ್ ಕಾಮಗಾರಿಗಾಗಿ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ KW-4ರ ರೀತಿ ದ್ವಿಲಕೋಟಿ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https:// kppp.karnataka.gov.in ಮುಖಾಂತರ ಕಾಮಗಾರಿಯ ಟೆಂಡರ್‌ಗಾಗಿ ಭಾಗವಹಿಸಬಹುದು. ಟೆಂಡರ್ ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಇಂಜಿನಿಯರ್, ರವರ ಕಛೇರಿ ಲೋಕೋಪಯೋಗಿ ಇಲಾಖೆ, ವಿಭಾಗ ಮಂಡ್ಯ, ರವರ ಕಛೇರಿಯಲ್

21, 22ರಂದು ನವಗ್ರಹ ದೇವಸ್ಥಾನ ಹಾಗೂ ನಾಗರಕಲ್ಲುಗಳ ಪ್ರತಿಷ್ಠಾಪನೆ



ಮಂಡ್ಯ: ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ಜೈನಹಳ್ಳಿ ಗ್ರಾಮದಲ್ಲಿ ಜ. 21 ಮತ್ತು 22ರಂದು ನವಗ್ರಹ ದೇವಸ್ಥಾನ ಹಾಗೂ ನಾಗರಕಲ್ಲುಗಳ ಪ್ರತಿಷ್ಠಾಪನೆ ಹಾಗೂ ಉದ್ಘಾಟನಾ ಕಾರ್ಯಕ್ರಮನ ಹಮ್ಮಿಕೊಳ್ಳಲಾಗಿದೆ.

ಜ.21ರ ಬುಧವಾರದಂದು ಬೆಳಿಗ್ಗೆ ಗಣಪತಿ ಪೂಜೆ ಮತ್ತು ಪುಣ್ಯಂಗ ಹೋಮ, ಅರಳಿ ಮರ ಮತ್ತು ಬೇವಿನ ಮರದ ವಿವಾಹ ಕಾರ್ಯಕ್ರಮ ನಂತರ ಪ್ರಸಾದ ವಿನಿಯೋಗವನ್ನು ಮಾಡಿ ಸಂಜೆ ನವಗ್ರಹ ನಾಗರಕಲ್ಲುಗಳ ಶಯನೋತ್ಸವ ಕಲಾಕ್ಷೇತ್ರ ಪೂಜಾ ಹೋಮಾದಿಗಳು ನೆರವೇರಲಿವೆ.

ಜ.22ರ ಗುರುವಾರ ಬ್ರಾಹ್ಮಿ ಮುಹೂರ್ತದಲ್ಲಿ ವಾದ್ಯಗೋಷ್ಠಿ ಸಮೇತ ಕಳಸ ಪ್ರವೇಶ, ವಿಗ್ರಹಗಳ ಅಷ್ಟದಿಗ್ಬಂದ ಪ್ರತಿಷ್ಠಾಪನೆ, ಜಲಾಭಿಷ್ಠ ನಂತರ ಪಂಚಾಮೃತ ಅಭಿಷೇಕ ಮಹಾಮಂಗಳಾರತಿ ಮಾಡಿ ತೀರ್ಥ ಪ್ರಸಾದವನ್ನು ನೀಡಲಾಗುವುದು. ರಾತ್ರಿ ಶ್ರೀ ಲಕ್ಷ್ಮಿ ದೇವಿ ಕೃಪಾಪೋಷಿತ ನಾಟಕ ಮಂಡಳಿಯವರಿಂದ ಶ್ರೀ ಶನಿಪ್ರಭಾವ ಎಂಬ ಪೌರಾಣಿಕ ನಾಟಕವನ್ನು ಏರ್ಪಡಿಸಲಾಗಿದೆ.

ಉದ್ಘಾಟನೆಯನ್ನು ಕೆ.ಆರ್.ಪೇಟೆ ಕ್ಷೇತ್ರದ ಶಾಸಕ ಎಚ್.ಟಿ.ಮಂಜು ಅವರು ನೆರವೇರಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಮಾಜಿ ಸಚಿವ ಕೆ.ಸಿ.ನಾರಾಯಣಗೌಡ, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್ ಅವರುಗಳು ಉಪಸ್ಥಿತರಿರಲಿದ್ದಾರೆ. ಸಮಾರಂಭದ ಅಧ್ಯಕ್ಷತೆಯನ್ನು ಮನಮುಲ್ ನಿರ್ದೇಶಕರಾದ ಕೆ.ರವಿ, ಎಂ.ಬಿ.ಹರೀಶ್ ಅವರುಗಳು ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಆರ್ ಟಿ ಓ ಸಂಘದ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ್, ಮಿತ್ರ ಫೌಂಡೇಶನ್ ಸಂಸ್ಥಾಪಕ ವಿಜಯ ರಾಮೇಗೌಡ, ಟಿ ಎ ಪಿ ಸಿ ಎಂ ಎಸ್ ಮಾಜಿ ಅಧ್ಯಕ್ಷ ಬಿ. ಎಲ್.ದೇವರಾಜ್, ನಿರ್ದೇಶಕ ಎಚ್.ಟಿ.ಲೋಕೇಶ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಎಸ್.ಎಸ್.ಅಂಬರೀಶ್, ಪ್ರಥಮ ದರ್ಜೆ ಗುತ್ತಿಗೆದಾರ ಎ.ಆರ್.ರಘು, ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಧರಣೇಶ್ ಪಾಲ್ಗೊಳ್ಳಲಿದ್ದಾರೆ. ಸಮಾರಂಭದಲ್ಲಿ ಜ್ಞಾನ ಬುತ್ತಿ ಸಂಸ್ಥೆಯ ವ್ಯವಸ್ಥಾಪಕ ಜೈನಹಳ್ಳಿ ಸತ್ಯನಾರಾಯಣಗೌಡ, ಡಿಐಜಿ ಜಿ.ಕೆ.ರಶ್ಮಿಶರತ್, ಬಿಎಸ್ಎನ್ಎಲ್ ಇಂಜಿನಿಯರ್ ಜೆ.ಎಸ್.ಲೋಕೇಶ್, ರಾಜೀವ್ ಗಾಂಧಿ ವಸತಿ ನಿಗಮದ ಪ್ರಧಾನ ವ್ಯವಸ್ಥಾಪಕ ಪರುಶರಾಮೇಗೌಡ, ಜೈನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿಯವರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ನಿರ್ದೇಶಕ ಕೆ.ಸೋಮಶೇಖರ, ಜೈನಹಳ್ಳಿ, ಮುದ್ದಾಪುರ, ಸಿಂಗನಹಳ್ಳಿ ಗ್ರಾಮಗಳ ಜನಪ್ರತಿನಿಧಿಗಳು, ಮುಖಂಡರುಗಳು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಯುವಕರು, ಮಹಿಳೆಯರು, ಗ್ರಾಮಸ್ಥರುಗಳು ಸೇರಿದಂತೆ ಹಲವರು ಪಾಲ್ಗೊಳ್ಳಲಿದ್ದಾರೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿ ಮಾಡಬೇಕೆಂದು ಸಂಘಟಕರು ಮನವಿ ಮಾಡಿದ್ದಾರೆ.

ಶಾಸಕನಾಗಿ ಆಯ್ಕೆಯಾಗಲು ಸಂವಿಧಾನ ಕಾರಣ

ಶಾಸಕ ಅನಿಲ್ ಚಿಕ್ಕಮಾದು ಹೇಳಿಕೆ | ಡಾ.ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಭೂಮಿ ಪೂಜೆ

ಎಚ್.ಡಿ.ಕೋಟೆ: ನಾನು ಚುನಾವಣೆಗೆ ಸ್ಪರ್ಧಿಸಿ ಗೆಲುವು ಸಾಧಿಸಿ ಚುನಾಯಿತ ಪ್ರತಿನಿಧಿಯಾಗಲು ಡಾ.ಬಿ.ಆರ್.ಅಂಬೇಡ್ಕರ್ ಅವರು ನೀಡಿರುವ ಸಂವಿಧಾನವೇ ಕಾರಣ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ತಾಲೂಕಿನ ಚೌಡಹಳ್ಳಿ ಗ್ರಾಮದಲ್ಲಿ 20 ಲಕ್ಷ,ರೂ, ವೆಚ್ಚದ ಡಾ.ಬಿ. ಆರ್.ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿ, ಬಾಬಾ ಸಾಹೇಬರು ಎಸ್.ಸಿ, ಎಸ್.ಟಿ ಸೇರಿದಂತೆ ಎಲ್ಲ ಸಮುದಾಯಗಳಿಗೂ ರಾಜಕೀಯ ಅವಕಾಶ ಕಲ್ಪಿಸಿ ಕೊಟ್ಟಿದ್ದಾರೆ. ಇಲ್ಲದಿದ್ದರೆ ನಾವು ಯಾರು ಕೂಡ ಚುನಾಯಿತ ಪ್ರತಿನಿಧಿಗಳಾಗಲು ಸಾಧ್ಯವಾಗುತ್ತಿರಲಿಲ್ಲ. ಶ್ರೇಷ್ಠ ಸಂವಿಧಾನವನ್ನು ನಮ್ಮ ಭಾರತಕ್ಕೆ ನೀಡಿರುವ ಏಕೈಕ ವ್ಯಕ್ತಿ ಅಂಬೇಡ್ಕರ್ ಅವರು ಎಂದರು. ಚೌಡಹಳ್ಳಿ ಗ್ರಾಮದಲ್ಲಿ ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಬೇಡಿಕೆ ಇತ್ತು. ಇದನ್ನು ಮನಗಂಡು 20 ಲಕ್ಷ, ರೂ, ವೆಚ್ಚದಲ್ಲಿ ಭವನ ನಿರ್ಮಾಣವಾಗುತ್ತಿದೆ. ಮತ್ತಷ್ಟು ಹೆಚ್ಚು ಅನುದಾನ ನೀಡಿ ಸುಂದರ ಭವನ ನಿರ್ಮಾಣ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಗ್ರಾಮದ ಕೆರೆ ಏರಿ ಬ್ಯಾರಿಕೆಟ್ ನಿರ್ಮಾಣಕ್ಕೆ 8 ಲಕ್ಷ ರೂ, ಬಿಡುಗಡೆ ಮಾಡಿದ್ದು, ಗ್ರಾಮಕ್ಕೆ ರಸ್ತೆ ಹಾಗೂ ಬಸ್ ಸೌಲಭ್ಯವನ್ನು ಒದಗಿಸಲಾಗುವುದು ಎಂದು ಭರವಸೆ ನೀಡಿದರು.

ವಕೀಲ ಚೌಡಹಳ್ಳಿ ಜವರಯ್ಯ ಮಾತನಾಡಿ, ಈ ದಿನ ಗ್ರಾಮದಲ್ಲಿ ಅಂಬೇಡ್ಕರ್ ಭವನ ನಿರ್ಮಾಣ ಆಗುತ್ತಿರುವುದು ಅತ್ಯಂತ ಸಂತಸ ತಂದಿದೆ. ಗ್ರಾಮದಲ್ಲಿನ ರಸ್ತೆಗಳು ಗುಂಡಿ ಬಿದ್ದಿದ್ದು, ರಸ್ತೆ ನಿರ್ಮಾಣಕ್ಕೆ ಶಾಸಕರು ಗಮನಹರಿಸಬೇಕು ಹಾಗೂ ಗ್ರಾಮದ ಪಕ್ಕದಲ್ಲಿರುವ ಕೆರೆಗೆ ತಡೆಗೋಡುಗಳನ್ನು ನಿರ್ಮಾಣ ಮಾಡಬೇಕು ಬಲದಂಡೆ ತಾರಕ ನಾಲೆಗಳು ಅಭಿವೃದ್ಧಿ ಆಗಬೇಕು ಇವೆಲ್ಲ ಬೇಡಿಕೆಗಳೊಂದಿಗೆ ಶಾಸಕರಿಗೆ ಗ್ರಾಮಸ್ಥರ ಮನವಿ ಸಲ್ಲಿಸಿದ್ದೇವೆ ನಮ್ಮ ಗ್ರಾಮಕ್ಕೆ ಬೇಕಾದ ಹಲವು ಸೌಲಭ್ಯಗಳನ್ನು ಶಾಸಕರು ಮಾಡುತ್ತಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಗ್ರಾ.ಪಂ. ಸದಸ್ಯ ಚೆಲುವಯ್ಯ, ಯಜಮಾನರಾದ ಮಾದಯ್ಯ, ಮಲ್ಲೇಶ್, ದೇವಲಾಪುರ ನಾಗೇಶ್, ಪಿಡಿಒ ರವಿಕುಮಾರ್, ಯೂತ್ ಕಾಂಗ್ರೆಸ್ ಅಧ್ಯಕ್ಷ ಅಜರ್, ಲಿಂಗಯ್ಯ, ಕೆಂಪ ಸಿದ್ದಯ್ಯ, ಚಂದ್ರು ಹಾಗೂ ಗ್ರಾಮದ ಮುಖಂಡರು ಗ್ರಾಮಸ್ಥರು ಅಧಿಕಾರಿಗಳು ಮಹಿಳೆಯರು ಇದ್ದರು.

ಜಿಲ್ಲಾ ಕೇಂದ್ರ ಕಾರಾಗೃಹ ಅಧೀಕ್ಷಕರ ವಿರುದ್ಧ ದೂರು ಸಲ್ಲಿಸಲು ನಿರ್ಣಯ

ಚಾಮರಾಜನಗರ, ಕಕ್ಷಿದಾರರ ಭೇಟಿಗೆ ವಕೀಲರಿಗೆ ಅವಕಾಶ ನೀಡದೆ ಅನುಚಿತವಾಗಿ ನಡೆದುಕೊಳ್ಳುತ್ತಿರುವ ಜಿಲ್ಲಾ ಕೇಂದ್ರ ಕಾರಾಗೃಹ ಅಧೀಕ್ಷಕ ಶಿವಕುಮಾರ್ ವಿರುದ್ಧ ಎಸ್ಪಿ, ಗೃಹ ಸಚಿವ ಮತ್ತು ಮುಖ್ಯಮಂತ್ರಿಗಳಿಗೆ ದೂರ ಸಲ್ಲಿಸಲು ವಕೀಲರ ಸಂಘದ ಸಭೆಯಲ್ಲಿ ತೀರ್ಮಾನಿಸಲಾಯಿತು.ನಗರದ ನ್ಯಾಯಾಲಯದ ಸಮೀಪದಲ್ಲಿ ರುವ ಜಿಲ್ಲಾ ವಕೀಲರ ಸಂಘದ ಕಚೇರಿಯಲ್ಲಿ ನಡೆದ ಪದಾಧಿಕಾರಿಗಳ ಸಭೆಯಲ್ಲಿ ಜಿಲ್ಲಾ ಕಾರಾಗೃಹ ಅಧೀಕ್ಷಕ ಶಿವಕುಮಾರ್ ವಿರುದ್ಧ ದೂರು ಸಲ್ಲಿಸಲು ವಕೀಲರು ಸರ್ವಾನುಮತದಿಂದ ನಿರ್ಣಯ ಕೈಗೊಂಡರು.

ಸಭೆಯ ಅಧ್ಯಕ್ಷ ತೆ ವಹಿಸಿದ್ದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ರಾಮಸಮುದ್ರ ಪುಟ್ಟಸ್ವಾಮಿ ಮಾತನಾಡಿ ವಕೀಲರು ತಮ್ಮ ಕಕ್ಷಿದಾರರನ್ನು ಭೇಟಿ ಮಾಡಲು ಜಿಲ್ಲಾ ಕೇಂದ್ರ ಕಾರಾಗೃಹದ ಅಧೀಕ್ಷಕ ಶಿವಕುಮಾರ್ ಅವಕಾಶ ನೀಡದೆ ಅನುಚಿತವಾಗಿ ನಡೆದು ಕೊಳ್ಳುತ್ತಿದ್ದಾರೆ ಎಂದು ಆರೋಪಿಸಿ ವಕೀಲರ ಸಂಘದ ಸದಸ್ಯರು ಸಂಘಕ್ಕೆ ದೂರ ನೀಡಿದ ಹಿನ್ನೆಲೆಯಲ್ಲಿ ಸಂಘದ ಪದಾಧಿಕಾರಿಗಳ ಸಭೆಯನ್ನು ಕರೆದು ಕರೆದು ಚರ್ಚಿಸಲಾಗಿದೆ ಎಂದು ತಿಳಿಸಿದರು. ಸಭೆಯಲ್ಲಿ ವ್ಯಕ್ತವಾದ ಅಭಿಪ್ರಾಯದಂತೆ ಜಿಲ್ಲಾ ಕಾರಾಗೃಹ ಅಧೀಕ್ಷಕರ ವಿರುದ್ಧ ಎಸ್ಪಿ, ಗೃಹ ಸಚಿವರು ಮತ್ತು ಮುಖ್ಯಮಂತ್ರಿಗಳಿಗೆ ದೂರು ಸಲ್ಲಿಸಲು ಸರ್ವಾನುಮತದಿಂದ ತೀರ್ಮಾನಿಸಲಾಗಿದೆ ಎಂದರು. ಪ್ರಾಧಿಕಾರದಿಂದ ನೇಮಕವಾಗಿರುವ ವಕೀಲರನ್ನು ಮಾತ್ರ ಜೈಲಿನ ಒಳಗೆ ಬಿಡುತ್ತಿದ್ದಾರೆ ಆದರೆ ಆರೋಪಿ ಪರವಾದ ವಕೀಲರು ಖಾಸಗಿ ವಕೀಲರಾಗಿದ್ದಾರೆ.ಆಗಾಗ್ಗೆ ಅವರನ್ನು ಒಳಗಡೆ ಬಿಡುವುದಿಲ್ಲ ಎಂದು ಹೇಳಿ ಪ್ರಸನ್ನ ಕುಮಾರ್ ಬಿ ಎಂಬ ವಕೀಲರನ್ನು ಕಕ್ಷಿದಾರರ ಭೇಟಿ ಗೆ ಅವಕಾಶ ನೀಡದೆ ಹೊರ ಕಳುಹಿಸಿದ್ದಾರೆ ಈ ಬಗ್ಗೆ ಸಂಬಂಧಿಸಿದ ವಕೀಲರು ಚಾಮರಾಜನಗರ ಜಿಲ್ಲಾ ವಕೀಲರ ಸಂಘಕ್ಕೆ ದೂರು ಸಲ್ಲಿಸಿದ ಹಿನ್ನೆಲೆಯಲ್ಲಿ ಸರ್ವ ಸದಸ್ಯರ ಸಭೆ ಕರೆದು ಚರ್ಚಿಸಿಸಲಾಯಿತು. ಸಭೆಯಲ್ಲಿ ಭಾಗವಹಿಸಿದ್ದ ವಕೀಲರು ಮಾತನಾಡಿ ಕಾರಾಗೃಹಉಂಟಾಗುತ್ತಿರುವ ತಾರತಮ್ಯ ಕಿರುಕುಳ ಮತ್ತು ವಕೀಲರನ್ನು ಜೈಲು ಅಧಿಕಾರಿ ಕೀಳಾಗಿ ಕಾಣುತ್ತಿರುವುದು ಸರಿಯಲ್ಲ ಎಂದು ಆಕ್ಷೇಪಸಿದರು. ವಕೀಲರು ತಮ್ಮ ಕಕ್ಷಿದಾರರ ಜೊತೆ ಸಂಪರ್ಕ ನಡೆಸಿ ಮಾಹಿತಿ ಪಡೆಯುವುದು ಕಾನೂನು ಬದ್ಧವಾದ ಹಕ್ಕು ಅದು ಸಂವಿಧಾನಾತ್ಮಕವಾದ ಹಕ್ಕು ಆದ್ದರಿಂದ ಪ್ರಸನ್ನ ಕುಮಾರ್ ಎಂಬ ವಕೀಲರನ್ನು ಜೈಲು ಅಧೀಕ್ಷಕ ಶಿವಕುಮಾರ್ ಅವರು ಒಳಗಡೆ ಬಿಡದೆ ವಾಪಸ್ಸು ಕಳುಹಿಸಿರುವುದು ನ್ಯಾಯಾಲಯದ ನಿಂದನೆ ಮತ್ತು ವಕೀಲರ ಸಮೂಹಕ್ಕೆ ಮಾಡಿದ ಅಪಮಾನ ಎಂಬ ಅಭಿಪ್ರಾಯ ವ್ಯಕ್ತವಾಯಿತು.

ಮುಖ್ಯಮಂತ್ರಿಗಳು ಹಾಗೂ ಗೃಹ ಮಂತ್ರಿಗಳು ಸಂಬಂಧಪಟ್ಟ ಕಾರಾಗೃಹದ ಅಧಿಕಾರಿಯ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ನಿರ್ಣಹಿಸಲಾಯಿತು. ಸಭೆಯಲ್ಲಿ ವಕೀಲರ ಸಂಘದ ಕಾರ್ಯದರ್ಶಿ ಶಿವರಾಮ, ಉಪಾಧ್ಯಕ್ಷ ದೊಡ್ಡಮೋಳೆ ರಂಗಸ್ವಾಮಿ ಹಿರಿಯ ವಕೀಲರಾದ ಶಿವಲಿಂಗೇಗೌಡ, ಚಿನ್ನಸ್ವಾಮಿ,ಪುಟ್ಟಸ್ವಾಮಿ ಇತರರು ಭಾಗವಹಿಸಿದ್ದರು.

ವರದಿ ತಯಾರಿಕೆಗೆ ಮಾಹಿತಿ ನೀಡಿ

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾರೋತ್ ಹೇಳಿಕೆ | ಜಿಲ್ಲಾಮಟ್ಟದ ಅಧಿಕಾರಿಗಳಿಗೆ ತರಬೇತಿ ಕಾರ್ಯಾಗಾರ

ಚಾಮರಾಜನಗರ, ಜಿಲ್ಲಾ ಮಾನವ ಅಭಿವೃದ್ಧಿ ಹಾಗೂ ಸಮಗ್ರ ಮತ್ತು ಸುಸ್ಥಿರ ಜಿಲ್ಲಾ ಅಭಿವೃದ್ಧಿ ವರದಿ ತಯಾರಿಸಲು ಅಧಿಕಾರಿಗಳು ನಿಖರ ದತ್ತಾಂಶಗಳನ್ನೊಳಗೊಂಡ ಮಾಹಿತಿ ನೀಡುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ತಿಳಿಸಿದರು.

ನಗರದ ಜಿಲ್ಲಾ ಪಂಚಾಯತ್ ಹಳೇ ಕೆ.ಡಿ.ಪಿ ಸಭಾಂಗಣದಲ್ಲಿಂದು ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ಸಹಯೋಗದಲ್ಲಿ ಜಿಲ್ಲಾ ಮಾನವ ಅಭಿವೃದ್ಧಿ ವರದಿ–2025 ಮತ್ತು ಸಮಗ್ರ ಹಾಗೂ ಸುಸ್ಥಿರ ಜಿಲ್ಲಾ ಅಭಿವೃದ್ಧಿ ಯೋಜನೆ–2031ರ ವರದಿ ತಯಾರಿಕೆ ಸಂಬಂಧ ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಏರ್ಪಡಿಸಲಾಗಿದ್ದ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಮಾನವ ಅಭಿವೃದ್ಧಿಯಲ್ಲಿ ಜನರ ಜೀವನಮಟ್ಟ, ಶಿಕ್ಷಣ, ಆರೋಗ್ಯ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ, ಕೃಷಿ, ಕೌಶಲ್ಯಾಭಿವೃದ್ಧಿ, ಕೈಗಾರಿಕೆ, ಉದ್ಯೋಗಸೃಷ್ಟಿ, ಮೂಲಸೌಕರ್ಯ, ಪೌಷ್ಟಿಕ ಆಹಾರ, ಆದಾಯ ಸೇರಿದಂತೆ ಇತರೆ ಅಂಕಿ ಅಂಶಗಳನ್ನು ಪರಿಗಣ ಸಲಾಗುತ್ತಿದೆ. ವರದಿಗಳನ್ನು ಪರಿಣಾಮಕಾರಿಯಾಗಿ ರೂಪಿಸಲು ಅಧಿಕಾರಿಗಳು ನಿಖರ ಮಾಹಿತಿ ಒದಗಿಸಬೇಕು. ಯಾವುದೇ ನಿರ್ಲಕ್ಷ್ಯ ವಹಿಸದೇ ನಿಗದಿತ ಕಾಲಮಿತಿಯಲ್ಲಿ ಮಾಹಿತಿ ನೀಡಬೇಕು. ಉತ್ತಮ ಮಾಹಿತಿ ಸಲ್ಲಿಕೆಯಿಂದ ಸಾಮಾಜಿಕ, ಪ್ರಾದೇಶಿಕ ಅಸಮಾನತೆ ತಡೆಯಬ ಹುದಾಗಿದೆ ಎಂದರು.

ಅಭಿವೃದ್ಧಿ ಸೂಚ್ಯಂಕಗಳ ಆಧಾರದಲ್ಲಿ ಜಿಲ್ಲೆಯ ಸಮಗ್ರ ಅಭಿವೃದ್ಧಿಯನ್ನು ಗುರುತಿಸಲಾಗುವುದು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳಿಗೆ ಸಾಮಾಜಿಕ ನ್ಯಾಯ ಒದಗಿಸಲು ಸರ್ಕಾರಕ್ಕೆ ಅನುಕೂಲವಾಗಲಿದೆ. ಚಾಮರಾಜನಗರ ಜಿಲ್ಲೆಯ ಅಭಿವೃದ್ಧಿಗೂ ಇದು ಪೂರಕವಾಗಲಿದೆ. ಮುಂದಿನ 5 ವರ್ಷಗಳ ಅವಧಿಗೆ ಮಾನವ ಅಭಿವೃದ್ಧಿ ವರದಿ ತಯಾರಿಕೆ ಹಿನ್ನೆಲೆಯಲ್ಲಿ ನಿಖರ, ಸ್ಪಷ್ಟ ಮಾಹಿತಿ ಸಲ್ಲಿಕೆಗೆ ವಿವಿಧ ಇಲಾಖೆಗಳ ನಡುವೆ ಸಮನ್ವಯ, ಸಹಕಾರ ಅವಶ್ಯವಾಗಿದೆ ಎಂದು ಹೇಳಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಶೃತಿ, ಮುಖ್ಯ ಯೋಜನಾಧಿಕಾರಿ ಹೊನ್ನರಾಜು, ಮೈಸೂರು ವಿವಿಯ ಅರ್ಥಶಾಸ್ತ್ರ ಹಾಗೂ ಸಹಕಾರ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ನವೀತ ತಿಮ್ಮಯ್ಯ, ಇತರರು ಕಾರ್ಯಾಗಾರದಲ್ಲಿ ಉಪಸ್ಥಿತರಿದ್ದರು.

ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತಕ್ಕೆ 130ನೇ ಸ್ಥಾನ

ಮೈಸೂರಿನ ಎಸ್.ಐ.ಆರ್.ಡಿ ಸಮಾಲೋಚಕ ಡಾ. ಜಿ.ಎಸ್. ಗಣೇಶ್‌ಪ್ರಸಾದ್ ಮಾತನಾಡಿ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ 184 ರಾಷ್ಟ್ರಗಳ ಪೈಕಿ ಭಾರತವು 130ನೇ ಸ್ಥಾನ ಪಡೆದಿದ್ದು, ದೇಶದಲ್ಲಿ ಕರ್ನಾಟಕ 11ನೇ ಸ್ಥಾನದಲ್ಲಿದೆ. ಜಿಲ್ಲಾವಾರು ಮಾಹಿತಿಯನ್ವಯ ಚಾಮರಾಜನಗರ ಜಿಲ್ಲೆ ಆರೋಗ್ಯ ಕ್ಷೇತ್ರದಲ್ಲಿ ಗಣನೀಯ ಪ್ರಗತಿ ಸಾಧಿಸಿದೆ. ಶಿಕ್ಷಣ ಹಾಗೂ ಆದಾಯ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿ ಕಾಣಬೇಕಿದೆ. ಹೀಗಾಗಿ ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಿಂದ ವರದಿ ತಯಾರಿಸಬೇಕಿದೆ. ಯಾವುದೇ ಗ್ರಾಮ ಪಂಚಾಯಿತಿ ಅಭಿವೃದ್ಧಿಗೆ ಅಲ್ಲಿನ ಆರೋಗ್ಯ, ಶಿಕ್ಷಣ, ಜನರ ಜೀವನಮಟ್ಟ ಸುಧಾರಣೆ ಅಗತ್ಯವಾಗಿದೆ. ಕರ್ನಾಟಕ ರಾಜ್ಯ ಅಧಿಕಾರ ವಿಕೇಂದ್ರಿಕರಣ ಯೋಜನೆಯ ಆಶಯದಂತೆ ಕೆಳಹಂತದ ಜನರ ಬೇಡಿಕೆ, ಅಭಿಪ್ರಾಯ ಸಂಗ್ರಹಿಸಿ ಅಭಿವೃದ್ಧಿ ವರದಿಗಳನ್ನು ರೂಪಿಸಬೇಕಾಗಿದೆ ಎಂದರು. 2011ರ ಜನಗಣತಿ ಆಧಾರದಡಿ ಇಡೀ ದೇಶದಲ್ಲಿಯೇ ಮೊದಲ ಬಾರಿಗೆ ಕರ್ನಾಟಕದಲ್ಲಿ 2015ರಲ್ಲಿ ಮಾನವ ಅಭಿವೃದ್ಧಿ ಬಗ್ಗೆ ಜಿಲ್ಲಾಮಟ್ಟದಲ್ಲಿ ವರದಿ ತಯಾರಿಸಲು ಅವಕಾಶ ಮಾಡಿಕೊಡಲಾಗಿತ್ತು. 2015ರಿಂದ 2025ರವರೆಗಿನ ಅಭಿವೃದ್ಧಿ ಸೂಚ್ಯಂಕವನ್ನು ಈಗ ತಯಾರಿಸಬೇಕಾಗಿರುವ ವರದಿಯಲ್ಲಿ ದಾಖಲಿಸಬೇಕು. ಸ್ವಾತಂತ್ರ್ಯ ನಂತರ ಮಾನವ ಅಭಿವೃದ್ಧಿಗೆ ಉತ್ಪನ್ನಗಳ ಹಾಗೂ ಆದಾಯಗಳ ಮೂಲವನ್ನು ಪರಿಗಣ ಸಲಾಗುತ್ತಿತ್ತು. ಬಳಿಕ ನೊಬೆಲ್ ಪುರಸ್ಕೃತರಾದ ಡಾ. ಅಮರ್ತ್ಯ ಸೇನ್ ಹಾಗೂ ಡಾ. ಎಂ.ವಿ. ಹಕ್ ಅವರು ಮಾನವ ಅಭಿವೃದ್ಧಿಗೆ ಸಾಕಷ್ಟು ಪರಿಕಲ್ಪನೆಗಳನ್ನು ಪರಿಚಯಿಸಿದ್ದಾರೆ ಎಂದು ತಿಳಿಸಿದರು. ಯಾವುದೇ ದೇಶದ ಅಭಿವೃದ್ಧಿ ಸೂಚ್ಯಂಕವು ಅಲ್ಲಿನ ಶಿಕ್ಷಣ, ಆರೋಗ್ಯ ಕ್ಷೇತ್ರಗಳ ಅಭಿವೃದ್ಧಿಯನ್ನು ಅವಲಂಬಿಸಿದೆ. ನಾವು ಸಾಕಷ್ಟು ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿದ್ದೇವೆ. ಇತರೆ ದೇಶಗಳಗೂ ಪೈಪೋಟಿ ನೀಡುತ್ತಿದ್ದೇವೆ. ಅದಾಗ್ಯೂ ನಮ್ಮಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಕೆಲ ಕ್ಷೇತ್ರಗಳಲ್ಲಿ ಅಭಿವೃದ್ಧಿ ಇನ್ನೂ ಮರಿಚಿಕೆಯಾಗಿದೆ. ವರದಿ ತಯಾರಿಕೆಯಲ್ಲಿ ಯಾವುದೇ ಒಂದು ವರ್ಗದ ಅಭಿವೃದ್ಧಿಯನ್ನು ಮಾನದಂಡವಾಗಿ ಪರಿಗಣಿಸಬಾರದು. ಸಮುದಾಯದ ಸಹಭಾಗಿತ್ವದೊಂದಿಗೆ ವರದಿ ತಯಾರಿಸಲು ಅಧಿಕಾರಿಗಳು ಮುಂದಾಗಬೇಕಿದೆ. ಪ್ರಸ್ತುತ ಮಾನವ ಅಭಿವೃದ್ಧಿ ವರದಿ ತಯಾರಿಕೆ ಅಧಿಕಾರಿಗಳಿಗೆ ಸವಾಲಿನ ಕೆಲಸವಾಗಿದೆ ಎಂದು ಹೇಳಿದರು.

ವಾಸವಿ ವಿದ್ಯಾನಿಕೇತನ ಶಾಲೆ ವಾರ್ಷಿಕೋತ್ಸವ

ರಾಮನಗರ: ನಗರದ ವಾಸವಿ ವಿದ್ಯಾನಿಕೇತನ ಶಾಲೆಯ ವಾರ್ಷಿಕೋತ್ಸವ ಸಮಾರಂಭ ಇಲ್ಲಿನ ಶ್ರೀ ಕನ್ನಿಕ ಮಹಲ್‌ನಲ್ಲಿ ನಡೆಯಿತು.

ಸ

ಸಂಕ್ಷಿಪ್ತ ಸುದ್ದಿ

ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಹಾಜರಾತಿ ಕಡ್ಡಾಯ

ಮೈಸೂರು: ಜನವರಿ 26 ರಂದು ಬೆಳಗ್ಗೆ 9 ಗಂಟೆಗೆ ನಗರದ ಬನ್ನಿಮಂಟಪ ಪಂಜಿನ ಕವಾಯಿತು ಮೈದಾನಲ್ಲಿ ನಡೆಯುವ ಗಣರಾಜ್ಯೋತ್ಸವ ಸಮಾರಂಭದಲ್ಲಿ ಜಿಲ್ಲಾ ಮಟ್ಟದ ಇಲಾಖಾ ಅಧಿಕಾರಿ, ಸಿಬ್ಬಂದಿ (ಕೇಂದ್ರ/ರಾಜ್ಯ ಸರ್ಕಾರ, ಮಂಡಳಿ, ನಿಗಮ, ಸ್ವಾಯತ್ತ ಸಂಸ್ಥೆಗಳು ಸೇರಿದಂತೆ) ಭಾಗವಹಿಸುವುದು ಕಡ್ಡಾಯವಾಗಿರುತ್ತದೆ.

ಸದರಿ ದಿನದಂದು ಬನ್ನಿಮಂಟಪ ಪಂಜಿನ ಕವಾಯಿತು ಮೈದಾನದ ಪ್ರವೇಶ ದ್ವಾರದಲ್ಲಿ ಇಲಾಖಾವಾರು ಇರಿಸಲಾಗಿರುವ ಹಾಜರಾತಿ ವಹಿಯಲ್ಲಿ ಸಮಾರಂಭಕ್ಕೆ ಹಾಜರಾಗುವ ಅಧಿಕಾರಿ, ನೌಕರರು ಕಡ್ಡಾಯವಾಗಿ ಸಹಿ ಮಾಡಿ ಸಮಾರಂಭದಲ್ಲಿ ಭಾಗವಹಿಸುವುದು. ಸಮಾರಂಭ ಮುಕ್ತಾಯಗೊಂಡ ನಂತರ ಹಾಜರಾತಿ ಪಡೆಯಲು ನಿಯೋಜಿಸಿದ ಅಧಿಕಾರಿಗಳು ಹಾಜರಾತಿ ವಹಿಯನ್ನು ತಪ್ಪದೆ ಈ ಕಛೇರಿಗೆ ಸಲ್ಲಿಸಬೇಕು ಎಂದು ಅಪರ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ

ಮೈಸೂರು: ವಿ.ವಿ.ಮೊಹಲ್ಲಾ ಉಪವಿಭಾಗದ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಅಳವಡಿಸುವ ಕೆಲಸದ ನಿಮಿತ್ತ ದಿನಾಂಕ 21–01–2026 ರಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಈ ಕೆಳಕಂಡ ಪ್ರದೇಶಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಗೋಕುಲಂ 11 ಕೆ.ವಿ. ವಿದ್ಯುತ್ ಮಾರ್ಗದ ವ್ಯಾಪ್ತಿಯಲ್ಲಿ ಬರುವ ಗೋಕುಲಂ 3ನೇ ಹಂತ, ಮೈಸೂರು ಒನ್, ಗೋಕುಲಂ ಸುತ್ತಮುತ್ತ, ಇ.ಎಸ್.ಐ ಕ್ವಾಟ್ರಸ್ ಹಿಂಭಾಗ, ಕೃಷ್ಣ ಮಂದಿರ ಟೆಂಪಲ್, ಗೋಕುಲಂ ಡಾಕ್ಷರ್ಸ್ ಕಾಲೋನಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.
ಮುಡಾ ಗ್ರೌಂಡ್ 11 ಕೆ.ವಿ. ವಿದ್ಯುತ್ ಮಾರ್ಗದ ವ್ಯಾಪ್ತಿಯಲ್ಲಿ ಬರುವ ವಿಜಯನಗರ 2ನೇ ಹಂತ, ಡಾಲ್ಫಿನ್ ಬೇಕರಿ, ಆಯಿಸ್ಟಾರ್ ಬೇ, ಸಪ್ತಪದಿ ಚೌಲ್ಟ್ರಿ, ವಿಜಯನಗರ ಐ.ಸಿ.ಐ.ಸಿ.ಐ. ಬ್ಯಾಂಕ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ವಿ.ವಿ.ಮೊಹಲ್ಲಾ ವಿಭಾಗ, ಚಾ.ವಿ.ಸ.ನಿ.ನಿ., ಕಾರ್ಯನಿರ್ವಾಹಕ ಇಂಜಿನಿಯರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಿನಲ್ಲಿ ಬಿಜೆಪಿ ಸಂಭ್ರಮ

ಮೈಸೂರು: ಭಾರತೀಯ ಜನತಾ ಪಕ್ಷದ ನೂತನ ರಾಷ್ಟ್ರೀಯ ಅಧ್ಯಕ್ಷರಾಗಿ ನಿತಿನ್ ನಬಿನ್ ಅವರ ಅಧಿಕಾರ ಸ್ವೀಕರಿಸಿದ ಹಿನ್ನೆಲೆಯಲ್ಲಿ ಮೈಸೂರು ಬಿಜೆಪಿ ಕಚೇರಿಯಲ್ಲಿ ಕಾರ್ಯಕರ್ತರು ಸಿಹಿ ಹಂಚಿ ಸಂಭ್ರಮಿಸಿದರು.

ಬಿಜೆಪಿ ನಗರ ಹಾಗೂ ಜಿಲ್ಲಾ ಬಿಜೆಪಿ ಕಾರ್ಯಕರ್ತರು ವಿವಿಧ ಜಯಘೋಷಣೆಗಳನ್ನು ಕೂಗಿ ಸಂಭ್ರಮಿಸಿದರು. ಈ ವೇಳೆ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ರಾಷ್ಟ್ರೀಯ ಅಧ್ಯಕ್ಷರಾಗಿ ನಿತಿನ್ ನಬಿನ್ ನೇಮಕದಿಂದಾಗಿ ಬಿಜೆಪಿಯಲ್ಲಿ ಹೊಸ ಶಕ್ತಿ ಬಂದಂತೆ ಆಗಿದೆ.ಮುಂದಿನ ದಿನಗಳಲ್ಲಿ ಪಕ್ಷವನ್ನು ಮತ್ತಷ್ಟು ಶಕ್ತಿಯುತವಾಗಿ ಬೆಳೆಸುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿಯವರನ್ನು ಮತ್ತಷ್ಟು ಗಟ್ಟಿಗೊಳಿಸುವಲ್ಲಿ ಈ ಬೆಳವಣಿಗೆ ಆಶಾದಾಯಕವಾಗಿದೆ ಎಂದರು.

ಮಾಜಿ ಸಂಸದ ಪ್ರತಾಪಸಿಂಹ ಮಾತನಾಡಿ, ಅತ್ಯಂತ ಯುವ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಎಂಬ ಹೆಗ್ಗಳಿಕೆ ಪಾತ್ರರಾಗಿದ್ದಾರೆ. ಅತ್ಯಂತಯುವಕರಿಗೆ ಪಕ್ಷದ ಜವಾಬ್ದಾರಿ ಕೊಡಬೇಕೆಂಬ ನರೇಂದ್ರಮೋದಿಯವರ ಸಂಕೇತ ಇದಾಗಿದೆ. ಇವರಿಗೆ ಚಾಮುಂಡೇಶ್ವರಿ ಹೆಚ್ಚಿನ ಶಕ್ತಿ ನೀಡಿ ಪಕ್ಷವನ್ನು ಯಶಸ್ವಿಯಾಗಿ ಮುನ್ನಡೆಸಲಿ ಎಂದರು.

ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್ ಗೌಡ, ಮೈಸೂರು ಅರಗು ಮತ್ತು ಬಣ್ಣ ಕಾರ್ಖಾನೆ ಮಾಜಿ ಅಧ್ಯಕ್ಷ ಫಣೀಶ್, ಮಾಜಿ ಮೇಯರ್ ಶಿವಕುಮಾರ್, ರಾಜ್ಯ ಬಿಜೆಪಿ ಉಪಾಧ್ಯಕ್ಷ ರಾಜೇಂದ್ರ, ರಾಜ್ಯ ಬಿಜೆಪಿ ಮಾಧ್ಯಮ ವಕ್ತಾರ ಮಹೇಶ್, ಮಾಜಿ ಉಪಮೇಯರ್ ಶೈಲೆಂದ್ರ, ನಗರಪಾಲಿಕೆ ಮಾಜಿ ಸದಸ್ಯ ಚಿಕ್ಕವೆಂಕಟು, ಬಿಜೆಪಿ ಮುಖಂಡರಾದ ಪಡುವಾರಹಳ್ಳಿ ರಾಮಕೃಷ್ಣ, ದಿನೇಶ್‌ಗೌಡ,ಪುನೀತ್, ಅರುಣ್ ಕುಮಾರ್, ರಾಕೇಶ್ ಗೌಡ ಇನ್ನಿತರರು ಉಪಸ್ಥಿತರಿದ್ದರು.

ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಕಲಿಕೆಯ ಜೊತೆಗೆ ಆತ್ಮ ವಿಶ್ವಾಸ ಇರಬೇಕು

ಭಯ ಬಿಟ್ಟು ಪರೀಕ್ಷೆ ಎದುರಿಸಿ: ರವಿಕುಮಾರ್

ಮಂಡ್ಯ: ಪರೀಕ್ಷೆ ಎಂಬ ಭಯ ಬಿಟ್ಟು ಪರೀಕ್ಷೆಯನ್ನು ಎದುರಿಸಬೇಕು. ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಕಲಿಕೆಯ ಜೊತೆಗೆ ಆತ್ಮವಿಶ್ವಾಸದ ಅಗತ್ಯವಿದೆ ಎಂದು ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕ ರವಿಕುಮಾರ್ ಅವರು ಹೇಳಿದರು.

ಶಾಲಾ ಶಿಕ್ಷಣ ಇಲಾಖೆ, ಮಂಡ್ಯ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಆಯೋಜಿಸಿದ್ದ "ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ಎದುರಿಸುವುದು ಹೇಗೆ? ಪ್ರೇರಣದಾಯಿ ಕಾರ್ಯಗಾರ ಹಾಗೂ ಸ್ಫೂರ್ತಿ ಸಿಂಚನ ಕಾರ್ಯಾಗಾರ"ವನ್ನು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಪರೀಕ್ಷೆಯನ್ನು ಉತ್ಸಾಹದಿಂದ ಎದುರಿಸಿದಾಗ ಮಾತ್ರ ಪರೀಕ್ಷೆಯಲ್ಲಿ ಉತ್ತೀರ್ಣರಾಗಬಹುದು. ಪರೀಕ್ಷೆಯಲ್ಲಿ ಅನುತ್ತೀರ್ಣಗೊಳ್ಳುತ್ತೇವೆ ಎಂಬ ಭಯದಿಂದ ಪರೀಕ್ಷೆಯನ್ನು ಎದುರಿಸಿದರೆ ಪರೀಕ್ಷೆಯಲ್ಲಿ ಅನುತ್ತೀರ್ಣಗೊಳ್ಳುತ್ತೀರಿ. ಪರೀಕ್ಷೆಯ ಭಯ ಬಿಟ್ಟು ಯಾವ ವಿಷಯ ನಿಮಗೆ ಕಷ್ಟ ಎನಿಸುತ್ತದೆಯೋ ಸದರಿ ವಿಷಯದ ಮೇಲೆ ಹೆಚ್ಚಿನ ಅಭ್ಯಾಸ ನಡೆಸಿ ಎಂದು ಹೇಳಿದರು.

ಜಿಲ್ಲೆಯ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು ಸದರಿ ವರ್ಷದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಜಿಲ್ಲೆಗೆ ಹೆಸರು ತರುವಂತಹ ಸಾಧನೆ ಮಾಡಬೇಕು. ವಿದ್ಯಾರ್ಥಿಗಳು ತಮ್ಮ ತಂದೆ ತಾಯಿ ಗುರುಗಳಿಗೆ ಹೆಸರು ತರಬೇಕು. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ಜಿಲ್ಲೆಯ ಎಲ್ಲಾ ವಿದ್ಯಾರ್ಥಿಗಳಿಗೂ ನಾನೆ ಸ್ವತಃ ಗೌರವಿಸಿ ಸನ್ಮಾನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಜಿಲ್ಲಾಧಿಕಾರಿ ಡಾ ಕುಮಾರ ಅವರು ಮಾತನಾಡಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿ ಜೀವನ ಒಂದು ಮಹತ್ತರವಾದ ಘಟ್ಟವಾಗಿದೆ. ಪರೀಕ್ಷೆಯನ್ನು ಮನೆಯ ಹಬ್ಬದಂತೆ ಸಂಭ್ರಮಿಸಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಸಾಧನೆ ಮಾಡಿ. ಜೀವನದಲ್ಲಿ ಒಳ್ಳೆಯ ಗುರಿ ಸಕಾರಾತ್ಮಕ ಚಿಂತನೆಗಳನ್ನು ಬೆಳೆಸಿಕೊಳ್ಳಿ. ಪರೀಕ್ಷಾರ್ಥಿಗಳು

ಪರೀಕ್ಷೆಯಲ್ಲಿ ಯೋಧರಂತೆ ಹೋರಾಡಿ ನೂರಕ್ಕೆ ನೂರು ಅಂಕಗಳನ್ನು ಪಡೆದು ಜಯಿಸಬೇಕು ಎಂದು ಹೇಳಿದರು.

ಪರೀಕ್ಷೆಯ ಸಮಯದಲ್ಲಿ ಸಮಯ ನಿರ್ವಹಣೆ ಬಹಳ ಮುಖ್ಯ. ಯಾವ ವಿಷಯವನ್ನು ಎಷ್ಟು ಗಂಟೆ ಹ

ಓದಬೇಕು ಯಾವ ವಿಷಯಕ್ಕೆ ಹೆಚ್ಚಿನ ಆದ್ಯತೆ ನೀಡಿ ಕಲಿಯಬೇಕು ಎಂಬುದರ ಕುರಿತು ಸಮಯ ನಿಗದಿ ಪಡಿಸಿಕೊಳ್ಳಿ. ಪರೀಕ್ಷೆ ಬರೆಯುವ ಸಂದರ್ಭದಲ್ಲಿ ಸಮಯ ಪಾಲನೆ ಅತಿ ಮುಖ್ಯ. ಎಲ್ಲಾರಿಗೂ 24 ಗಂಟೆಗಳೆ ಇರುವುದು ಒತ್ತಡದಿಂದ ಅಭ್ಯಾಸ ನಡೆಸಿ ನಿದ್ದೆಗೆಡಬೇಡಿ ಎಂದು ಕಿವಿಮಾತು ಹೇಳಿದರು.

ಪ್ರಸ್ತುತ ನಾವೆಲ್ಲರೂ ಸ್ಪರ್ಧಾತ್ಮಕ ಯುಗದಲ್ಲಿ ಬದುಕುತ್ತಿದ್ದೇವೆ. ವಿದ್ಯಾರ್ಥಿಗಳು ಕೇವಲ ಪಾಸ್ ಆದರೆ ಸಾಕು ಎಂದು ಪಾಸಿಂಗ್ ಅಂಕಗಳಿಗಾಗಿ ಓದಬೇಡಿ. ಪರೀಕ್ಷೆಗೆ ಭಯ ಪಟ್ಟು ಆತಂಕವಾದಿಗಳಾಗದೆ ಋಣಾತ್ಮಕ ಚಿಂತನೆಗಳನ್ನು ಬೆಳೆಸಿಕೊಳ್ಳಿ. ಕಳೆದ ಬಾರಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಮಂಡ್ಯ ಜಿಲ್ಲೆ ರಾಜ್ಯದಲ್ಲಿ 12 ಸ್ಥಾನ ಪಡೆದುಕೊಂಡಿದೆ. ಸದರಿ ವರ್ಷ ನಾವು ರಾಜ್ಯದಲ್ಲಿ 1 ಸ್ಥಾನ ಅಲಂಕರಿಸಬೇಕು ಎಂದು ಹೇಳಿದರು.

ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ದೆಸೆಯಲ್ಲಿ ತಂದೆ ತಾಯಿಗಳಿಗೆ ಗೌರವ ಕೊಡಬೇಕು. ತಂದೆ ತಾಯಿಗಳಿಗೆ ಗೌರವ ನೀಡಿದ ವ್ಯಕ್ತಿಗಳು ಮಾತ್ರ ಜೀವನದಲ್ಲಿ ಮುಂದೆ ಬರಲು ಸಾಧ್ಯ. ನಿಮಗೆ ಪಾಠ ಹೇಳಿದ ಗುರುಗಳಿಗೆ ಗೌರವ ನೀಡಿ ವಿನಮ್ರವಾಗಿರಿ. ಪರೀಕ್ಷೆ ಸಮಯದಲ್ಲಿ ಟಿ.ವಿ, ಮೊಬೈಲ್ ಬಳಕೆ ಕಡಿಮೆ ಮಾಡಿ ಪರೀಕ್ಷೆಯತ್ತ ಗಮನ ಹರಿಸಿ ಎಂದು ಹೇಳಿದರು.

ಜಿಲ್ಲಾಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಆರ್ ನಂದಿನಿ ಅವರು ಮಾತನಾಡಿ ಯಾವುದೇ ಪರೀಕ್ಷೆಗೆ ಹೋಗುವಾಗ ಸ್ವಲ್ಪ ಭಯ ಇರಬೇಕು ಆದರೆ ನಮ್ಮ ಏಕಾಗ್ರತೆಯನ್ನು ತಪ್ಪಿಸುವಂತಹ ಭಯ ಇರಬಾರದು.

ಪರೀಕ್ಷೆ ವಿದ್ಯಾರ್ಥಿಗಳ ಜೀವನದಲ್ಲಿ ತಮ್ಮ ಪ್ರತಿಭೆಯನ್ನು ತೋರಿಸಲು ಬರುವ ಒಂದು ಸುವರ್ಣಾವಕಾಶ ಅದನ್ನು ಸಂಭ್ರಮದಿಂದ ಆಚರಿಸಬೇಕು ಎಂದು ಹೇಳಿದರು.

ಪರೀಕ್ಷೆಯಲ್ಲಿ ಅನುತ್ತೀರ್ಣ ಆದ ಮಾತ್ರಕ್ಕೆ ಜೀವನವೇ ಮುಗಿಯಿತು ಅಂದುಕೊಳ್ಳುವುದು ತಪ್ಪು. ಪರೀಕ್ಷೆಗೆ ಹೋಗುವಾಗ ಎಲ್ಲಾ ಭಯವನ್ನು ಮನೆಯಲ್ಲಿ ಇರಿಸಬೇಕು.

ಪರೀಕ್ಷೆಗೆ ನೀಲಿ ನಕ್ಷೆ ಪ್ರಕಾರ ಅಭ್ಯಾಸ ಮಾಡಿ ಪ್ರಶ್ನೆ ನೀಡಿದ ಸಂದರ್ಭದಲ್ಲಿ ಗೊತ್ತಿರುವ ಪ್ರಶ್ನೆಗಳಿಗೆ ಮೊದಲು ಉತ್ತರಿಸಿ.

ಫಲಿತಾಂಶದ ಕುರಿತು ಚಿಂತೆ ಬೇಡ. ನಿಮ್ಮ ಮೇಲೆ ನಂಬಿಕೆ ಇಟ್ಟು ಪರೀಕ್ಷೆ ಬರೆಯಿರಿ ಜೀವನಕ್ಕಿಂತ ದೊಡ್ಡ ಪರೀಕ್ಷೆ ಇಲ್ಲ..

ಜೀವನದಲ್ಲಿ ಪಾಸ್ ಆಗಬೇಕು ಎಂದರೆ ಶೈಕ್ಷಣಿಕ ಪರೀಕ್ಷೆಗಳಲ್ಲಿ ಭಯ ಬಿಡಬೇಕು. ಫಲಿತಾಂಶದ ಮೇಲೆ ನಂಬಿಕೆ ಇಡದೆ ನಿಮ್ಮ ಮೇಲೆ ನಂಬಿಕೆ ಕಲಿಕೆಯ ಮೇಲೆ ನಂಬಿಕೆ ಇಡಬೇಕು ಎಂದು ಹೇಳಿದರು.

ಪರೀಕ್ಷೆಗೆ ಇನ್ನೂ ಸಮಯ ಇದೆ... ಎಲ್ಲ ವಿಷಯಗಳನ್ನು ಸಂಪೂರ್ಣವಾಗಿ ಅಭ್ಯಾಸ ಮಾಡಿ. ಪ್ರತಿ ದಿನ ಯೋಗ ಪ್ರಾಣಾಯಾಮ ಅಭ್ಯಾಸ ಮಾಡಿ ಅದರಿಂದ ಏಕಾಗ್ರತೆ ಹೆಚ್ಚುತ್ತದೆ ಟಿ.ವಿ, ಮೋಬೈಲ್ ಸಭೆ ಸಮಾರಂಭಗಳಿಂದ ದೂರವಿರಿ ಎಂದು ಹೇಳಿದರು.

ನಂತರ ಸಂಪನ್ಮೂಲ ವ್ಯಕ್ತಿಗಳಾದ ಡಾ.ರಾಜೇಶ್ ದಿವಾಕರ್ ನಾಯಕ್ ಅವರು ಮಾತನಾಡಿ ಪರೀಕ್ಷಾ ಕೊಠಡಿಯಲ್ಲಿ ತಪ್ಪು ಮಾಡಬೇಡಿ, ಪರಿಕ್ಷೆಯಲ್ಲಿ ಉತ್ತರ ಬರೆಯುವ ಮೊದಲು ನಮ್ಮ ಆಲೋಚನೆಯನ್ನು ರಿಸೆಟ್ ಮಾಡಿ ರಿಫ್ರೆಶ್ ಆಗಬೇಕು ಆಗ ಅಭ್ಯಾಸ ಮಾಡಿರುವ ಉತ್ತರಗಳು ನೆನಪಿಗೆ ಬರುತ್ತವೆ. ಪರೀಕ್ಷೆಯಲ್ಲಿ ಕೇಳುವ ಪ್ರಶ್ನೆಗಳನ್ನು 3 ಬಾರಿ ಓದಿ ಅರ್ಥ ಮಾಡಿಕೊಂಡ ನಂತರ ಉತ್ತರ ಬರೆಯಿರಿ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಲೋಕೇಶ್, ಕ್ಷೇತ್ರ ಶಿಕ್ಷಣಾಧಿಕಾರಿ ಮಹದೇವ, ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಕೆ.ನಾಗೇಶ್, ವಿಜಯ ಕರ್ನಾಟಕ ಮಂಡ್ಯ ಜಿಲ್ಲಾ ವರದಿಗಾರ ನವೀನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಜ.25 ರಂದು ಅಂತಾರಾಷ್ಟ್ರೀಯ ಮತದಾರರ ದಿನಾಚರಣೆ ಆಚರಿಸಿ: ಡಾ. ಕುಮಾರ

ಮಂಡ್ಯ : ಜನವರಿ 25 ರಂದು ಅಂತಾರಾಷ್ಟ್ರೀಯ ಮತದಾನ ದಿನಾಚರಣೆಯನ್ನು ನಗರದ ಡಿ ದೇವರಾಜ ಅರಸು ಸಭಾಂಗಣದಲ್ಲಿ ಆಯೋಜಿಸಲಾಗಿದ್ದು ಅರ್ಥಪೂರ್ಣವಾಗಿ ಆಚರಿಸಿ ಎಂದು ಜಿಲ್ಲಾಧಿಕಾರಿ ಡಾ ಕುಮಾರ ಅವರು ಹೇಳಿದರು.

ಜಿಲ್ಲಾಧಿಕಾರಿಗಳ ಕಛೇರಿಯ ಸಭಾಂಗಣದಲ್ಲಿ ಮಂಗಳವಾರ ಅಂತಾರಾಷ್ಟ್ರೀಯ ಮತದಾನ ದಿನಾಚರಣೆಯ ಸಂಬಂಧ ಪೂರ್ವ ಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಶಿಷ್ಟಾಚಾರದಂತೆ ಆಹ್ವಾನ ಪತ್ರಿಕೆಯನ್ನು ಮುದ್ರಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಲುಪಿಸಿ ಎಂದು ಹೇಳಿದರು.

ಜ.23 ರಂದು ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಮತದಾನ ಪ್ರತಿಜ್ಞಾವಿಧಿ ಬೋಧನೆ

ಜನವರಿ 23 ರಂದು ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಮತದಾನ ಪ್ರತಿಜ್ಞಾ ವಿಧಿಯನ್ನು ಬೋಧನೆ ಮಾಡಲಾಗುವುದು. ಅಂತರಾಷ್ಟ್ರೀಯ ಮತದಾರ ದಿನಾಚರಣೆಯ ಪ್ರಯುಕ್ತ ಏರ್ಪಡಿಸಿಲಾಗಿದ್ದ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದವರಿಗೆ ಬಹುಮಾನವನ್ನು ನೀಡಲಾಗುವುದು ಎಂದು ತಿಳಿಸಿದರು.

ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳು ಕಡ್ಡಾಯವಾಗಿ ಮತದಾನ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು.

ಉಪವಿಭಾಗಾಧಿಕಾರಿ ಶಿವಮೂರ್ತಿ, ಚುನಾವಣಾ ತಹಸೀಲ್ದಾರ್ ರವಿಶಂಕರ್, ಹಿಂದುಳಿದ ವರ್ಗದ ಇಲಾಖೆಯ ಜಿಲ್ಲಾಧಿಕಾರಿ ಮಂಜುಳಾ, ಮುಜುರಾಯಿ ತಹಸೀಲ್ದಾರ್ ತಮ್ಮೆಗೌಡ, ನಗರಸಭಾ ಪೌರಾಯುಕ್ತೆ ಪಂಪಶ್ರೀ, ಮಂಡ್ಯ ತಹಶೀಲ್ದಾರ್ ವಿಶ್ವನಾಥ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

ದೊಡ್ಡೇರಿ. ಮದುಗಿರಿ ತಾಲೂಕಿನ ಬಡವನಹಳ್ಳಿ ಗ್ರಾಮದ ಲ್ಲಿ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ, ಕಾಮಗಾರಿ ಗೆ ಮಾನ್ಯ ವಿದಾನಪರಿಷತ್ ಸದಸ್ಯ ಆ ರ್ ರಾಜೇಂದ್ರ ರವರು ಭೂಮಿ ಪೂಜೆ ನೆರವೇರಿಸಿದರು ಈ ಸಂದರ್ಭದಲ್ಲಿ ಬಡವನಹಳ್ಳಿ ಗ್ರಾಪಂ ಅಧ್ಯಕ್ಷೆ ಬಾನುಪ್ರಿಯ ನಾಗರಾಜು ಉಪಾಧ್ಯಕ್ಷೆ ಜಯಮ್ಮ ಗಣೇಶ್. ಬಾಣಪ್ಪ. ಮಾಜಿ ಜಿ.ಪಂ ಸದಸ್ಯ ಚೌಡಪ್ಪ ಮಾಜಿ.ತಾ.ಪಂ ಸದಸ್ಯ ನಜೀರ್ ಕೋಳಿ ಅಂಗಡಿ ಜಯರಾಮಯ್ಯ ಸುನಿಲ್ ಬಾಗಜ್ಜರ ರಂಗನಾಥ ಒ.ಬಿ.ಸಿ.ನಾಗರಾಜು. ಸಿರಿಯಪ್ಪ ಮುದ್ದರಾಜು ದಲಿತ ಮುಖಂಡ. ಅನೇಕ ಮುಖಂಡ ರು ಇದ್ದರು

ಗಣರಾಜ್ಯೋತ್ಸವದಂದು ಕಪ್ಪು ಬಾವುಟ ಪ್ರದರ್ಶನ: ಇಂಡುವಾಳು ಚಂದ್ರಶೇಖರ್

ಮಂಡ್ಯ: ಸರಕಾರಿ ಶಾಲೆಗಳ ವಿಲೀನ ವಿರೋಧಿಸಿ ಹಸಿರು ಸೇನೆ ಜತೆಗೂಡಿ ಜ.26ರ ಗಣರಾಜ್ಯೋತ್ಸವದಂದು ರಾಜ್ಯದ ಎಲ್ಲ 31 ಜಿಲ್ಲಾ ಕೇಂದ್ರಗಳಲ್ಲಿ ಕಪ್ಪುಬಾವುಟ ಪ್ರದರ್ಶನ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಇಂಡುವಾಳು ಚಂದ್ರಶೇಖರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿನ 40 ಸಾವಿರಕ್ಕೂ ಹೆಚ್ಚು ಶಾಲೆಗಳನ್ನು ಮ್ಯಾಗ್ನೆಟ್ ಮತ್ತು ಕೆಪಿಎಸ್ ಹೆಸರಿನಲ್ಲಿ ವಿಲೀನ ಮಾಡಲಾಗುತ್ತಿದೆ.

ಇದರಿಂದ ಬಡ ಮಕ್ಕಳು ಗುಣಮಟ್ಟದ ಶಿಕ್ಷಣದಿಂದ ವಂಚಿತರಾಗಲಿದ್ದಾರೆ ಎಂದರು.

ಸಂವಿಧಾನದ ಆರ್ಟಿಕಲ್ 21ಎ ನಂತೆ ಜನಸಾಮಾನ್ಯರಿಗೆ ಗುಣಮಟ್ಟದ ಉಚಿತ ಶಿಕ್ಷಣದ ಹಕ್ಕು ಸರಕಾರಗಳು ನೀಡುವಲ್ಲಿ ವಿಫಲವಾಗಿವೆ. ರಾಜ್ಯದ ಬಹುತೇಕ ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ರಾಜಕಾರಣಿಗಳ ಕಪಿಮುಷ್ಟಿಯಲ್ಲಿವೆ.

ಸರಕಾರಿ ಶಾಲೆಗಳಿಗೆ ಬೀಗ ಹಾಕಿ ಖಾಸಗಿ ಸಂಸ್ಥೆಗಳಿಗೆ ನೆರವಾಗಲು ಸರಕಾರವು ಸಂವಿಧಾನ, ಸಮಾಜ ವಿರೋಧಿ ಕೆಲಸಕ್

ಮಾಘಮಾಸದ ಮಹತ್ವ

। ಗಿರಿಜಾ.ಎಸ್. ದೇಶಪಾಂಡೆ. ಬೆಂಗಳೂರು.

ಹಿಂದೂ ಧರ್ಮ ಪರಂಪರೆಯಲ್ಲಿ ಮಾಘಮಾಸವು ಅತ್ಯಂತ ಪವಿತ್ರವಾದ ಘಟ್ಟವೆಂದು ಪರಿಗಣಿಸಲಾಗಿದೆ.ಈ ಮಾಸದಲ್ಲಿ ಪವಿತ್ರ ಸ್ನಾನ ,ದಾನ,ಪೂಜೆಗೆ ಪ್ರಶಸ್ತವಾಗಿದ್ದು ಈ ಸಮಯದಲ್ಲಿ ಮಾಡುವ ಪುಣ್ಯಕಾರ್ಯಗಳು ಅತ್ಯಂತ ಒಳ್ಳೆಯ ಫಲ ನೀಡುತ್ತವೆ.ಪಾಪಕ್ಷಯ ,ಆರೋಗ್ಯವೃದ್ಧಿ,ಸೌಭಾಗ್ಯ ಮತ್ತು ಮೊಕ್ಷವನ್ನು ತರುತ್ತವೆ ಎಂಬ ನಂಬಿಕೆಯಿದೆ.ಮಾಘಮಾಸದಲ್ಲಿ ಸೂರ್ಯ,ವಿಷ್ಣು,ಶಿವನ ಆರಾಧನೆಗೆ ಮಹತ್ವ ನೀಡಲಾಗುತ್ತದೆ.ಮಾಘಸ್ನಾನವು ಆತ್ಮಶುದ್ಧಿ ,ಧರ್ಮಸಾಧನೆಯ ಸಂಕೇತವಾಗಿದೆ.ಪ್ರಾತಃಕಾಲದ ಬ್ರಹ್ಮಮುಹೂರ್ತದಲ್ಲಿ ನದಿತೀರದಲ್ಲಿ ಅಥವಾ ತೀರ್ಥಗಳಲ್ಲಿ ಮಾಡುವ ಸ್ನಾನವು ಧರ್ಮ,ಅರ್ಥ,ಕಾಮ,ಮೋಕ್ಷ ನಾಲ್ಕು ಪುರುಷಾರ್ಥಗಳಿಗೆ ಸಹಾಯಕ ಎಂಬ ನಂಬಿಕೆ ಪುರಾತನ ಕಾಲದಿಂದಲೇ ಜೀವಂತವಾಗಿದೆ. ಮಾಘಸ್ನಾನದ ವಿಶೇಷತೆಯೆಂದರೆ ಇದು ಕೇವಲ ಒಂದುದಿನದ ಆಚರಣೆಯಲ್ಲ ಸಂಪೂರ್ಣ ಮೂವತ್ತು ದಿನಗಳು ನಿಯಮಬದ್ಧವಾಗಿ ಮಾಡುವ ಸಾಧನೆಯ ರೂಪವಾಗಿದೆ.ಪ್ರತಿದಿನ ಉದಯಕಾಲಕ್ಕೆ ಮುನ್ನ ಸ್ನಾನಮಾಡಿ ಸೂರ್ಯಾರಾಧನೆ,ವಿಷ್ಣುಶಿವ ಸ್ಮರಣೆ ಜಪತಪ ಧ್ಯಾನಾದಿಗಳನ್ನು ನೆರವೇರಿಸಿದರೆ ಅನಂತ ಫಲ ಲಭಿಸುವದು ಎಂಬ ನಂಬಿಕೆಯಿದೆ. ಗಂಗಾ,ಯಮುನಾ,ಗೋದಾವರಿ,ಕಾವೇರಿ ಮುಂತಾದ ಪವಿತ್ರನದಿಗಳಲ್ಲಿ ಮಾಡಿದ ಮಾಘಸ್ನಾನವು ಸಹಸ್ರ ಅಶ್ವಮೇಧ ಯಾಗ ಮಾಡಿದ ಫಲಕ್ಕೆ ಸಮಾನವೆಂದು ಪುರಾಣೋಕ್ತವಾಗಿದೆ.

ಪದ್ಮಪುರಾಣದಲ್ಲಿ 'ಮಾಘೇಮಾಸಿ ಗಂಗಾಸ್ನಾನಂ ಸರ್ವ ಪಾಪ ಪ್ರಣಾಶನಂ' ಎಂದು ಹೇಳಲಾಗಿದ್ದು ಮಾಘಮಾಸದಲ್ಲಿ ಗಂಗಾಸ್ನಾನ ಮಾಡಿದವನು ಜನ್ಮಾಂತರ ಪಾಪಗಳಿಂದಲೂ ಮುಕ್ತನಾಗುತ್ತಾನೆ ಎಂದು ಹೇಳಲಾಗುತ್ತದೆ.

ಇದು ಮನಸ್ಸಿನ ಮಲಿನತೆ ತೊಳೆದು ಧರ್ಮಬುದ್ಧಿಯನ್ನು ಪ್ರಬಲಗೊಳಿಸುತ್ತದೆ.

ಅಧ್ಯಾತ್ಮಿಕ ಮತ್ತು ವೈಜ್ಞಾನಿಕ ಕಾರಣ

ಮಾಘಮಾಸವು ವಸಂತ ಋತುವಿನ ಆರಂಭದ ಸಂಕ್ರಮಣಕಾಲ.ಈ ಅವಧಿಯಲ್ಲಿ ಪ್ರಾತಃಕಾಲದ ತಂಪು ನೀರಿನಲ್ಲಿ ಸ್ನಾನ ಮಾಡುವದರಿಂದ ದೇಹದ ರಕ್ತಸಂಚಾರ ಸುಧಾರಣೆ,ರೋಗನಿರೋಧಕ ಶಕ್ತಿ ವೃದ್ಧಿ,ಮನಸ್ಸಿಗೆ ಚೈತನ್ಯ ದೊರಕುತ್ತದೆ ಎಂದು ಆಯುರ್ವೇದ ದೃಷ್ಟಿಯಲ್ಲಿ ಸಮರ್ಥನೀಯವಾಗಿದೆ.ಈ ಸ್ನಾನವು ಅಹಂಕಾರ,ಅಜ್ಞಾನ,ಅಶುದ್ಧ ವಾಸನೆಗಳ ನಿವಾರಣೆಯ ಸಂಕೇತ.ಅಂತರಂಗದಲ್ಲಿ ಪಾಪವೃತ್ತಿಗಳನ್ನು ತ್ಯಜಿಸುವ ಸಂಕಲ್ಪವನ್ನು ಜಾಗೃತಗೊಳಿಸುತ್ತದೆ.

ಮಾಘಸ್ನಾನವು ಕೇವಲ ನೀರಿನಲ್ಲಿ ಮುಳುಗುವ ಕ್ರಿಯೆಯಾಗಿರದೇ ಧರ್ಮಸಾಧನೆ,ಆತ್ಮಶುದ್ಧಿ,ಸಮಾಜ ಸೌಹಾರ್ದತೆಯ ಸಂಕೇತವಾಗಿದೆ.ನಾಡಿನ ಜನತೆಗೆ ಮಾಘಮಾಸದ ಶುಭಾಶಯಗಳು.

ಭಾರತದಲ್ಲಿ ಗಗನಕ್ಕೇರುತ್ತಿರುವ ವೈದ್ಯಕೀಯ ವೆಚ್ಚಗಳು



ಇತ್ತೀಚಿನ ವರ್ಷಗಳಲ್ಲಿ ಭಾರತದಲ್ಲಿ ವೈದ್ಯಕೀಯ ತಂತ್ರಜ್ಞಾನ ಬೆಳೆದಿದೆ, ಅತ್ಯಾಧುನಿಕ ಚಿಕಿತ್ಸೆಗಳು ಲಭ್ಯವಿವೆ. ಆದರೆ, ಇದರ ಜೊತೆಜೊತೆಗೇ ಚಿಕಿತ್ಸಾ ವೆಚ್ಚವೂ ಸಾಮಾನ್ಯ ಜನರ ಕೈಗೆಟುಕದಷ್ಟು ದೂರ ಸರಿಯುತ್ತಿದೆ. ಆರೋಗ್ಯ ಎಂಬುದು ಈಗ ಕೇವಲ ಕಾಳಜಿಯ ವಿಷಯವಾಗಿ ಉಳಿಯದೆ, ಬಹುದೊಡ್ಡ ಆರ್ಥಿಕ ಸವಾಲಾಗಿ ಪರಿಣಮಿಸಿದೆ. ಇದರಿಂದಾಗಿ ಭಾರತದ ಮಧ್ಯಮ ವರ್ಗದ ಬಹುಪಾಲು ಕುಟುಂಬಗಳು ಒಂದು ಸಣ್ಣ ವೈದ್ಯಕೀಯ ತುರ್ತು ಪರಿಸ್ಥಿತಿಯಿಂದಾಗಿ ಆರ್ಥಿಕವಾಗಿ ದಿವಾಳಿಯಾಗುತ್ತಿವೆ.

ವೈದ್ಯಕೀಯ ಹಣದುಬ್ಬರ ಮತ್ತು ಜಾಗತಿಕ ಪ್ರಭಾವ :

ಭಾರತದಲ್ಲಿ ವೈದ್ಯಕೀಯ ಹಣದುಬ್ಬರವು (Medical Inflation) ಏಷ್ಯಾದಲ್ಲೇ ಅತ್ಯಧಿಕ ಎನ್ನಲಾಗುತ್ತಿದೆ. 2025–26ರ ಇತ್ತೀಚಿನ ದತ್ತಾಂಶಗಳ ಪ್ರಕಾರ, ಭಾರತದಲ್ಲಿ ಇದು ವಾರ್ಷಿಕ ಸುಮಾರು ಶೇ.12– 14 ರಷ್ಟು ವೇಗದಲ್ಲಿ ಬೆಳೆಯುತ್ತಿದೆ ಎಂದು ಆರ್ಥಿಕ ಸಮೀಕ್ಷೆಗಳು ಹೇಳುತ್ತಿವೆ. ಅಂದರೆ, ಸಾಮಾನ್ಯ ದಿನಬಳಕೆಯ ವಸ್ತುಗಳ ಬೆಲೆ ಏರಿಕೆಗಿಂತ ವೈದ್ಯಕೀಯ ವೆಚ್ಚ ಎರಡು ಪಟ್ಟು ವೇಗವಾಗಿ ಹೆಚ್ಚುತ್ತಿದೆ. ದೇಶದ ಒಟ್ಟು ಆರೋಗ್ಯ ವೆಚ್ಚದ ಶೇ. 62 ರಷ್ಟು ಭಾಗವನ್ನು ಇಂದಿಗೂ ಜನರು ತಮ್ಮ ಸ್ವಂತ ಉಳಿತಾಯದಿಂದಲೇ (Out-of-Pocket Expenditure) ಭರಿಸುತ್ತಿದ್ದಾರೆ ಎಂದು ರಾಷ್ಟ್ರೀಯ ಆರೋಗ್ಯ ಲೆಕ್ಕ ಪತ್ರಿಕೆ (NHA)ಅಂಕಿ ಅಂಶಗಳು ಹೇಳುತ್ತಿವೆ.

ಇದಕ್ಕೆ ಪ್ರಮುಖ ಕಾರಣ ಜಾಗತಿಕ ಕಂಪನಿಗಳ ಪ್ರಭಾವ. ಭಾರತವು 'ವಿಶ್ವದ ಔಷಧಾಲಯ' ಎಂದು ಕರೆಸಿಕೊಂಡರೂ, ಜಾಗತಿಕ ಹೆಲ್ತ್‌ಕೇರ್ ಮತ್ತು ಫಾರ್ಮಾ ಕಂಪನಿಗಳು ಇಲ್ಲಿನ ಮಾರುಕಟ್ಟೆಯನ್ನು ಪ್ರವೇಶಿಸಿದಂತೆ, ಪೇಟೆಂಟ್ ಪಡೆದ ಔಷಧಗಳ ಬೆಲೆ ಗಗನಕ್ಕೇರಿದೆ. ವಿದೇಶಿ ಹೂಡಿಕೆದಾರರು ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳು ದೊಡ್ಡ ಖಾಸಗಿ ಆಸ್ಪತ್ರೆಗಳಲ್ಲಿ ಬಂಡವಾಳ ಹೂಡುತ್ತಿರುವುದರಿಂದ, ಆಸ್ಪತ್ರೆಗಳು ಸೇವಾ ಸಂಸ್ಥೆಗಳಿಗಿಂತ ಹೆಚ್ಚಾಗಿ ಲಾಭಾಂಶದ ಮೇಲೆ ಕಣ್ಣಿಡುವ ಉದ್ದಿಮೆಗಳಾಗಿ ಬದಲಾಗುತ್ತಿವೆ.

ದುಬಾರಿ ರೋಬೋಟಿಕ್ ಉಪಕರಣಗಳು ಮತ್ತು ಆಮದು ಮಾಡಿಕೊಂಡ ಸ್ಕ್ಯಾನಿಂಗ್ ಯಂತ್ರಗಳ ವೆಚ್ಚ ಅಂತಿಮವಾಗಿ ರೋಗಿಯ ಬಿಲ್ ಮೇಲೆ ಹೊರೆಯಾಗುತ್ತಿದೆ.

ವಿಮೆ ಎಂಬ ರಕ್ಷಾಕವಚದ ಹಿಂದಿನ ಕಹಿ ಸತ್ಯ: ಆರ್ಥಿಕ ಹೊರೆ ತಪ್ಪಿಸಲು ಅನೇಕರು ಆರೋಗ್ಯ ವಿಮೆ (Health Insurance) ಮಾಡಿಸಿಕೊಳ್ಳುತ್ತಾರೆ. ಆದರೆ ವಿಮೆ ಇದ್ದರೂ ರೋಗಿಗಳ ಸಂಕಷ್ಟ ತಪ್ಪುತ್ತಿಲ್ಲ. ಭಾರತದಲ್ಲಿ ಸುಮಾರು ಶೇ. 25 ಕ್ಕಿಂತ ಹೆಚ್ಚು ವಿಮೆ ಕ್ಲೈಮ್‌ಗಳು ಮೊದಲ ಹಂತದಲ್ಲೇ ತಿರಸ್ಕೃತಗೊಳ್ಳುತ್ತವೆ (ಅಟಚಿಟಿ ಖಿಜರಿಜಿಛಿಣುಠಟಿ). ಹಳೆಯ ಕಾಯಿಲೆಗಳ ಬಗ್ಗೆ ಮಾಹಿತಿ ನೀಡದಿರುವುದು ಅಥವಾ ಪಾಲಿಸಿಯ ಅತ್ಯಂತ ಸಂಕೀರ್ಣ ನಿಯಮಗಳು ಇದಕ್ಕೆ ಪ್ರಮುಖ ಕಾರಣ.

ಮತ್ತೊಂದು ದೊಡ್ಡ ಸವಾಲೆಂದರೆ OPD ವ್ಯಾಪ್ತಿಯ ಕೊರತೆ. ಭಾರತದಲ್ಲಿನ ಬಹುಪಾಲು ವಿಮೆಗಳು ಕೇವಲ ಆಸ್ಪತ್ರೆಗೆ ದಾಖಲಾದಾಗ (Hospitalization) ಮಾತ್ರ ಹಣ ನೀಡುತ್ತವೆ. ಆದರೆ ವಾಸ್ತವದಲ್ಲಿ, ಕಾಯಿಲೆಯ ಶೇ. 70 ರಷ್ಟು ವೆಚ್ಚವು ಆಸ್ಪತ್ರೆಗೆ ದಾಖಲಾಗುವ ಮೊದಲಿನ ಸಮಾಲೋಚನೆ, ಸ್ಕ್ಯಾನಿಂಗ್, ರಕ್ತದ ತಪಾಸಣೆ ಮತ್ತು ದಿನನಿತ್ಯದ ಮಾತ್ರೆಗಳ ಮೇಲೆ ವ್ಯಯವಾಗುತ್ತದೆ. ಇದು ವಿಮೆಯ ವ್ಯಾಪ್ತಿಗೆ ಬರುವುದಿಲ್ಲ. ಜೊತೆಗೆ, ವಿಮೆ ಹೊಂದಿರುವ ರೋಗಿಗಳಿಗೆ ಆಸ್ಪತ್ರೆಗಳು ಹೆಚ್ಚಿನ ದರ ವಿಧಿಸುತ್ತಿವೆ ಎಂಬ 'ಬಿಲ್ಲಿಂಗ್ ತಾರತಮ್ಯ'ದ ದೂರುಗಳು ವ್ಯಾಪಕವಾಗಿ ಕೇಳಿಬರುತ್ತಿವೆ.

ವಿಮೆ ಖರೀದಿಸುವಾಗ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳು

ಕೇವಲ ವಿಮೆ ಇದೆ ಎಂಬ ಭ್ರಮೆಯಲ್ಲಿ ಇರಬಾರದು. ಪಾಲಿಸಿ ಖರೀದಿಸುವಾಗ ಈ ಅಂಶಗಳನ್ನು ಕಡ್ಡಾಯವಾಗಿ ಗಮನಿಸಬೇಕು.

- ಪ್ರಾಮಾಣಿಕ ಮಾಹಿತಿ: ಮಧುಮೇಹ ಅಥವಾ ರಕ್ತದೊತ್ತಡದಂತಹ ಹಳೆಯ ಕಾಯಿಲೆಗಳನ್ನು ಮರೆಮಾಚಬೇಡಿ. ಇದು ಮುಂದೆ ಕ್ಲೈಮ್ ತಿರಸ್ಕೃತಗೊಳ್ಳಲು ಕಾರಣವಾಗಬಹುದು.
- ವೇಟಿಂಗ್ ಪಿರಿಯಡ್: ಕೆಲವು ಕಾಯಿಲೆಗಳಿಗೆ 2 ರಿಂದ 4 ವರ್ಷಗಳ ನಂತರವೇ ವಿಮೆ ಅನ್ವಯವಾಗುತ್ತದೆ. ಈ 'ಕಾಯುವ ಅವಧಿ'ಯ ಬಗ್ಗೆ ಸ್ಪಷ್ಟತೆ ಇರಲಿ.
- ರೂಮ್ ರೆಂಟ್ ಮಿತಿ (ಖಣಛ–ಟುಟುಣ): ನಿಮ್ಮ ಪಾಲಿಸಿಯಲ್ಲಿ ಕೋಣೆಯ ಬಾಡಿಗೆಗೆ ಮಿತಿ ಇದೆಯೇ ಎಂದು ಪರೀಕ್ಷಿಸಿ. ರೂಮ್ ರೆಂಟ್ ಹೆಚ್ಚಾದರೆ ಶಸ್ತ್ರಚಿಕಿತ್ಸೆ ಮತ್ತು ವೈದ್ಯರ ಶುಲ್ಕವೂ ಪ್ರಮಾಣಾನುಗುಣವಾಗಿ ಹೆಚ್ಚಾಗುತ್ತದೆ.
- ಕ್ಲೈಮ್ ಸೆಟಲ್ಮೆಂಟ್ ರೇಷಿಯೋ: ಯಾವ ಕಂಪನಿ ಅತಿ ಹೆಚ್ಚು ಕ್ಲೈಮ್‌ಗಳನ್ನು ಯಶಸ್ವಿಯಾಗಿ ನೀಡಿದೆ ಎಂಬುದನ್ನು ನೋಡಿ ಆಯ್ಕೆ ಮಾಡಿ.

ಜನೌಷಧಿ ಮತ್ತು ವೈದ್ಯಕೀಯ ವರ್ಗದ ಸಂಘರ್ಷ

ಕೇಂದ್ರ ಸರ್ಕಾರವು ಜನೌಷಧಿ ಕೇಂದ್ರಗಳ ಮೂಲಕ ಅಗ್ಗದ 'ಜೆನೆರಿಕ್' ಔಷಧಗಳನ್ನು ಒದಗಿಸುತ್ತಿದೆ. ಇವು ಬ್ರಾಂಡೆಡ್ ಔಷಧಗಳಿಗಿಂತ ಶೇ. 50 ರಿಂದ ಶೇ. 80 ರಷ್ಟು ಅಗ್ಗವಾಗಿವೆ. ಆದರೆ, ವೈದ್ಯಕೀಯ ಸಮುದಾಯದಿಂದ ಇದಕ್ಕೆ ಸಂಪೂರ್ಣ ಬೆಂಬಲ ಸಿಗುತ್ತಿಲ್ಲ. ಅನೇಕ ವೈದ್ಯರು ಜೆನೆರಿಕ್ ಔಷಧಗಳ ಗುಣಮಟ್ಟದ ಬಗ್ಗೆ ಸಂಶಯ ವ್ಯಕ್ತಪಡಿಸುತ್ತಾರೆ. ಔಷಧ ಕಂಪನಿಗಳ ಪ್ರಬಲ ಮಾರ್ಕೆಟಿಂಗ್ ಮತ್ತು ರೋಗಿಗಳಲ್ಲಿ ಬ್ರ್ಯಾಂಡೆಡ್ ಔಷಧಗಳ ಮೇಲಿರುವ ಅತಿಯಾದ ನಂಬಿಕೆಯಿಂದಾಗಿ, ಜನೌಷಧಿಯ ಪ್ರಯೋಜನಗಳು ತಳಮಟ್ಟದ ಜನರಿಗೆ ತಲುಪುತ್ತಿಲ್ಲ.

ಸರ್ಕಾರ ಮತ್ತು ಪ್ರಾಥಮಿಕ ಆರೋಗ್ಯ ವ್ಯವಸ್ಥೆಯ ಸುಧಾರಣೆ ವೈದ್ಯಕೀಯ ವೆಚ್ಚ ತಗ್ಗಿಸಲು ಸರ್ಕಾರವು ಕೇವಲ ವಿಮೆ ನೀಡುವುದಷ್ಟೇ ಅಲ್ಲದೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು (PHC) ಬಲಪಡಿಸುವುದು ಅನಿವಾರ್ಯವಾಗಿದೆ:

1. ಕಲೂಅ ಮೇಲ್ದರ್ಜೆಗೆ: ಪ್ರತಿ 30 ಸಾವಿರ ಜನಸಂಖ್ಯೆಗೆ ಕನಿಷ್ಠ 3–4 ಪರಿಣಿತ ವೈದ್ಯರು ಮತ್ತು ಸುಸಜ್ಜಿತ ಪ್ರಯೋಗಾಲಯವಿರುವ ಕಲೂಅ ಗಳನ್ನು ಸರ್ಕಾರ ನಿರ್ಮಿಸಬೇಕು.
2. ಔಷಧ ದರ ನಿಯಂತ್ರಣ: ಅಗತ್ಯ ಮತ್ತು ಜೀವ ಉಳಿಸುವ ಔಷಧಗಳ ಬೆಲೆಯ ಮೇಲೆ ಕಟ್ಟುನಿಟ್ಟಾದ ನಿಯಂತ್ರಣ ಹೇರಬೇಕು.
3. ಮಧ್ಯಮ ವರ್ಗದ ಸೇರ್ಪಡೆ: ಆಯುಷ್ಮಾನ್ ಭಾರತ್ ನಂತಹ ಯೋಜನೆಗಳನ್ನು ಕೇವಲ ಬಿಪಿಎಲ್ ಕಾರ್ಡ್‌ದಾರರಿಗೆ ಸೀಮಿತಗೊಳಿಸದೆ, ಅಲ್ಪ ಪ್ರಮಾಣದ ಪ್ರೀಮಿಯಂನೊಂದಿಗೆ ಮಧ್ಯಮ ವರ್ಗಕ್ಕೂ ವಿಸ್ತರಿಸಬೇಕು.
4. ನಿಯಂತ್ರಣ ಪ್ರಾಧಿಕಾರ: ಖಾಸಗಿ ಆಸ್ಪತ್ರೆಗಳು ವಿಧಿಸುವ ಚಿಕಿತ್ಸಾ ದರವನ್ನು ಮೇಲ್ವಿಚಾರಣೆ ಮಾಡಲು ಸ್ವತಂತ್ರ ನಿಯಂತ್ರಣ ಪ್ರಾಧಿಕಾರ ರಚಿಸಬೇಕು.

ಆರೋಗ್ಯವು ಇಂದು ಕೇವಲ ದೈಹಿಕ ಸ್ಥಿತಿಯಾಗಿ ಉಳಿಯದೆ, ಕುಟುಂಬದ ಆರ್ಥಿಕ ಸ್ಥಿರತೆಯ ಭಾಗವಾಗಿದೆ. ವ್ಯವಸ್ಥೆಯಲ್ಲಿನ ಈ ಲೋಪದೋಷಗಳು ಮತ್ತು ಬೆಲೆ ಏರಿಕೆಯ ನಡುವೆ, ನಾವು ಜಾಗೃತ ನಾಗರಿಕರಾಗುವುದು ಅನಿವಾರ್ಯ. ವರ್ಷಕ್ಕೊಮ್ಮೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದು (Preventive Health Check-up) ರೋಗವನ್ನು ಮೊದಲೇ ಪತ್ತೆಹಚ್ಚಲು ಮತ್ತು ಲಕ್ಷಾಂತರ ರೂಪಾಯಿಗಳ ಅನಗತ್ಯ ವೆಚ್ಚವನ್ನು ತಡೆಯಲು ಸಹಾಯ ಮಾಡುತ್ತದೆ.

ಆರೋಗ್ಯಕರ ಜೀವನಶೈಲಿ ಅಳವಡಿಸಿಕೊಳ್ಳುವುದು ಮತ್ತು ಸರಿಯಾದ ಆರ್ಥಿಕ ಯೋಜನೆ ರೂಪಿಸುವುದೇ ಇಂದಿನ ದಿನಗಳಲ್ಲಿ ನಮ್ಮನ್ನು ವೈದ್ಯಕೀಯ ಸಾಲದ ಸುಳಿಯಿಂದ ಪಾರು ಮಾಡಬಲ್ಲ ಏಕೈಕ ದಾರಿ. ಆರೋಗ್ಯವೇ ಭಾಗ್ಯ ಎಂಬ ಮಾತು ಈಗ ಕೇವಲ ಗಾದೆಯಲ್ಲ, ಅದು ಬದುಕಿನ ಅತಿ ದೊಡ್ಡ ಅವಶ್ಯಕತೆ.

। ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

ಕನ್ನಡ ಭಾಷೆಯ ಬಳಕೆ

। ಪುಷ್ಪ ಪ್ರಸಾದ್

ಮೊನ್ನೆ ಆಫೀಸಿಗೆ ಹೋಗಲು ಆಟೋಗೆ ಕಾಯ್ತ ಇದ್ದೆ. ಯಾಕೋ ಯಾವ ಆಟೋ ರಿಕ್ಷಾನೂ ಕಾಣ್ತಾ ಇರಲಿಲ್ಲ. ನಮಗೆಲ್ಲಾ ಗೊತ್ತಿರುವ ವಿಚಾರವೇ, ನಮ್ಮ ಉಡುಪಿಯ ಕಲ್ಸಂಕದ ಟ್ರಾಫಿಕ್ ಗೋಳು. ಇಲ್ಲಿ ಅರ್ಧ ದಿನ ರೋಡಿನಲ್ಲಿ ಇನ್ನರ್ಧ ವಾಹನಕ್ಕಾಗಿ ಕಾಯುವುದರಲ್ಲಿ ಮುಗಿದು ಹೋಗುತ್ತದೆ ಎಂಬುವುದು ನಮ್ಮೂರಿನ ಎಲ್ಲಾ ಸಾಮಾನ್ಯರಿಗೂ ಸಾಮಾನ್ಯವಾಗಿ ಹೋಗಿದೆ, ರೋಡಿನಲ್ಲಿ ವ್ಯಯ ಮಾಡಿದ ಸಮಯವನ್ನು ನಿರ್ಲಕ್ಷಿಸುವುದು ಹೋಗಲಿ ಬಿಡಿ ಈಗ ನೇರ ವಿಚಾರಕ್ಕೆ ಬರುವೆ. ಆ ದಿನ ಕೊನೆಗೂ ನನಗೊಂದು ಆಟೋ ಸಿಕ್ಕಿತು. ರಸಗುಲ್ಲ ಬಾಯಿಗೆ ಬಂದು ಬಿದ್ದಂತೆ ಖುಷಿ ನನಗೆ, ಯಾಕೆಂದರೆ ಅದಾಗಲೇ ಸಮಯ ಆಗಿತ್ತು. ಬೇಗ ಹೋಗಿ ಹತ್ತಿ ಕುಳಿತುಕೊಂಡೆ.

ಮನಸೇ ಓ ಮನಸೇ?..? ಎಂಬ ಹಾಡು ನನ್ನ ಇಯಾರ್ ಫೋನ್ ನಿಂದ ಕೇಳಲಾರಂಭಿಸಿತು. ಆಗ ರಿಕ್ಷಾ ಚಾಲಕ ಕಾರ್ ಸ್ಟೀಟ್ ಕಡೆಯಿಂದ ಹೋಗಬೇಕಾ ಅಥವಾ ಸೀದಾ ಹೋಗ್ಬೇಕಾ ಕೇಳಿದ. ನಾನು ಅವನಿಗೆ ಉತ್ತರಿಸಿ, ಏನ್ ಅಣ್ಣ ಇವತ್ತು ಯಾರು ಸಿಗುತ್ತಿರಲಿಲ್ಲ, ಎಷ್ಟು ಹೊತ್ತಿನಿಂದ ಕಾಯುತ್ತ ಇದ್ದೆ ಗೊತ್ತಾ ಎನ್ನುವ ಪ್ರಶ್ನೆಯಿಂದ ಶುರುವಾಯಿತು ನಮ್ಮ ಸಂಭಾಷಣೆ. ಈ ಟ್ರಾಫಿಕ್ ನಲ್ಲಿ ಯಾರಾದರೂ ಮಾತನಾಡಲು ಸಿಕ್ಕರೆ ತುಂಬಾ ಚೆಂದ ಅಲ್ವಾ? ಕೆಲವೊಮ್ಮೆ ಇಂತಹ ಪರಿಸ್ಥಿತಿಯಲ್ಲಿ ಕಥ?ರಿ ತಲುಪುವ ತನಕ ಒಳ್ಳೆಯ ಗೆಳೆಯನಾಗುತ್ತಾನೆ ಎಂದರೆ ತಪ್ಪಿಲ್ಲ ಬಿಡಿ,

ಆದರೆ ಅಂದು ಸ್ವಲ್ಪ ಮುಂದೆ ಹೋಗುವಾಗ ಮತ್ತೊಬ್ಬರು ಆಟೋಗೆ ಕೈ ತೋರಿದರು ಪಾಪಾ ಅವರದು ನನ್ನದೇ ಕಥೆ ಲೇಟ್ ಆಗಿತ್ತು, ಅವರನ್ನು ಹತ್ತಿಸಿಕೊಂಡರು. ಅವರು ತುಳುವಿನಲ್ಲಿ ಮಾತನಾಡುತ್ತಿದ್ದರು. ಹಲವಾರು ಸಾಮಾನ್ಯ ವಿಷಯಗಳ ಬಗ್ಗೆ ಚರ್ಚಿಸುತ್ತಾ ಇರುವಾಗ ?ಕನ್ನಡ ಭಾಷೆಯ ಬಳಕೆ? ವಿಷಯ ನಡುವಿನಲ್ಲಿ ಬಂತು. ಆಟೋ ಚಾಲಕ ಹೇಳಿದ ಒಂದು ಸಂಗತಿ ಬಹಳ ಖುಷಿ ತಂದಿತು ನನಗೆ. ಹೇಳುತ್ತೇನೆ ಕೇಳಿ, ಪಾಪ ಕನ್ನಡ ಭಾಷೆ ಮಾತ್ರ ಬರುವ ಉತ್ತರ ಕರ್ನಾಟಕದ ಗುಳೇದಗುಡ್ಡದವನು ಈ ಆಟೋ ಚಾಲಕ. ಒಂದು ದಿನ ಒಬ್ಬ ವ್ಯಕ್ತಿ ಇವನಿಗೆ ಕರೆ ಮಾಡಿ ಆಟೋ ಬುಕ್ ಮಾಡಿ ಅವನ ಮನೆಯ ದಾರಿಯನ್ನು ಆಂಗ್ಲ ಭಾಷೆಯಲ್ಲಿ ಹೇಳುತ್ತಿದ್ದನಂತೆ.

ಸಂಭಾಷಣೆಯ ನಡುವಲ್ಲಿ ಹೇಗೋ ಈ ಚಾಲಕನಿಗೆ ತಿಳಿಯಿತಂತೆ ಆ ವ್ಯಕ್ತಿಗೆ ಕನ್ನಡ ಬರುತ್ತದೆ ಎಂದು. ಇವನು ಕನ್ನಡದಲ್ಲೇ ಉತ್ತರಿಸುತ್ತಿದ್ದರೂ ಅವನು ಮಾತ್ರ ಆಂಗ್ಲ ಭಾಷೆಯಲ್ಲೇ ಮುಂದುವರೆಸುತ್ತಿದ್ದನಂತೆ. ಇವನು ಬೇಕಂತಲೇ ತನ್ನ ಫೋನ್ ಹಿಡಿದು ?ಏನ್ ತಿಕ್ಲು ನನ್ ಮಗನಪ್ಪ ಇವ ಬರೀ ಇಂಗ್ಲಿಷ್ನಲ್ಲೇ ಮಾತಾಡಕತ್ತಾನೆ? ಎಂದನಂತೆ. ತಕ್ಷಣ ಆ ವ್ಯಕ್ತಿ ಏನ್ ನೀನು ಹಿಂಗೆಲ್ಲ ಮಾತಾಡ್ತೀಯ ಅಂತ ಶುರು ಮಾಡಿ ಒಂದೈದು ನಿಮಿಷ ಕನ್ನಡದಲ್ಲೇ ಬಯ್ದನಂತೆ. ಅವನು ಬಯ್ದು ಮುಗಿಸಿದ ಮೇಲೆ ಆಟೋ ಚಾಲಕ ಹೇಳಿದನಂತೆ, ?ಇಷ್ಟ್ ಚನ್ನಾಗ್ ಕನ್ನಡ ಮಾತಾಡಕತ್ತಿರಿ ಸರೆ, ಯಾಕ್ ನೀವು ಮೊದಲೇ ಇದನ್ನು ಮಾಡ್ಲಿಲ್ಲ? ನಾನು ಬಯ್ದದ್ದಕ್ಕೆ ಕ್ಷಮೆ ಕೇಳ್ತೀನಿ ಸರ್, ಆದ್ರೆ ನಮ್ಮ ಸ್ಥಿತಿನೂ ನೀವು ಅರ್ಥ ಮಾಡಾಬೇಕಲ್ವೇನ್ರಿ? ನಮಗೆ ಇಂಗ್ಲಿಷ್ ಬರಲ್ವಲಾ ಸರ್, ನಿಮಗೆ ಕನ್ನಡ ಬಂದ್ರೆ ನೀವು ಕನ್ನಡದಲ್ಲಿ ಮಾತನಾಡಿ ಸರ್.. ನಂತರ ಆ ವ್ಯಕ್ತಿಯೂ ಇವನ ಬಳಿ ಕ್ಷಮೆ ಕೇಳಿ ಕನ್ನಡದಲ್ಲೇ ಮಾತನಾಡಿದನಂತೆ. ಈ ವಿಷಯ ಕೇಳಿ, ಕನ್ನಡವನ್ನು ಅಂದು ಬಳಸಿ ಆ ವ್ಯಕ್ತಿಯ ಬಾಯಲ್ಲಿ ಕನ್ನಡವನ್ನು ಮಾತನಾಡಿಸಿದ್ದಕ್ಕೆ ನಾನು ನಮ್ಮ ಚಾಲಕನಿಗೆ ಒಂದು ಧನ್ಯವಾದ ಹೇಳಿದೆ. ಅಂದಿನ ಪಯಣ ಭಾಷೆ ಉಳಿದ ಸಾರ್ಥಕತೆಯಲ್ಲಿ ಮುಗಿಸಿದೆ.

ಈ ಸನ್ನಿವೇಶ ಕೇಳಿದ ಮೇಲೆ ನನಗೆ ಯಾಕೆ ನಮ್ಮಲ್ಲಿ ಕನ್ನಡಿಗರು ಸಿಕ್ಕರೆ ಖುಷಿ ಅಂತ ನಿಮಗೆ ಗೊತ್ತಾಗಿರಬಹುದು. ಜನ ಭಾಷೆ ಬಂದರೂ ಮಾತನಾಡಲು ಮುಜುಗರ ಪಟ್ಟುಕೊಳ್ಳುತ್ತಾರೆ. ಅವರಿಗೆ ಅದೇನು ಕೀಳರಿಮೆಯೋ? ಅಥವ